ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವ



# ಸುತ್ತೂರು ವಾರ್ತೆ

ಖಾಸಗಿ ಪ್ರಸಾರ ಸಂಪುಟ : 14 ಸಂಚಿಕೆ : 3 ಪುಟ 8 ಸುತ್ತೂರು ಶ್ರೀಕ್ಷೇತ್ರ ಬುಧವಾರ, 22 ಜನವರಿ 2020




## ಮಂಗಳವಾರದ ಜಾತ್ರೆ

ಸುತ್ತೂರು ಶ್ರೀಕ್ಷೇತ್ರ : ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವವು ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಒಂದು ವಾರ ನಡೆಯಲಿದೆ. ಮಂಗಳವಾರ ಸಂಜೆ ವಸ್ತುಪ್ರದರ್ಶನ, ಕೃಷಿಮೇಳ, ಸಾಂಸ್ಕೃತಿಕ ಮೇಳ, ದೇಸಿ ಆಟಗಳು, ದೋಣಿ ವಿಹಾರ, ರಂಗೋಲಿ, ಸೋಬಾನೆ ಸ್ಪರ್ಧೆ, ಕ್ಯಾನ್ಸರ್ ತಪಾಸಣಾ ಶಿಬಿರ ಇವುಗಳಿಗೆ ಶುಭ ಚಾಲನೆ ನೀಡಲಾಯಿತು.

## ನಮ್ಮ ಸಂಸ್ಕೃತಿಯಲ್ಲಿ ಜೀವಿಸೋಣ... ಅನ್ಯ ಸಂಸ್ಕೃತಿಯನ್ನು ಪ್ರೀತಿಸೋಣ...

ಸುತ್ತೂರು ಜಾತ್ರಾ ಮಹೋತ್ಸವದ ಕೃಷಿಮೇಳ, ಸಾಂಸ್ಕೃತಿಕ ಮೇಳ ಹಾಗೂ ದೇಶಿಯ ಆಟಗಳ ಉದ್ಘಾಟನಾ ಸಮಾರಂಭದಲ್ಲಿ ಅಧ್ಯಕ್ಷತೆಯನ್ನು ವಹಿಸಿದ್ದ ಕರ್ನಾಟಕ ರಾಜ್ಯ ಮಾಜಿ ಮುಖ್ಯಮಂತ್ರಿಗಳು, ಮಾಜಿ ಕೇಂದ್ರ ಸಚಿವರೂ ಆದ ಡಾ. ಎಂ. ವೀರಪ್ಪಮೊಯ್ಲಿಯವರು ಮಾತನಾಡುತ್ತ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಹೆಸರಿನಲ್ಲಿ ಪ್ರಾರಂಭವಾದ ಜಾತ್ರಾ ಮಹೋತ್ಸವವು ಪ್ರಮುಖವಾಗಿ ಗ್ರಾಮೀಣ ಅಭಿವೃದ್ಧಿ ಹಾಗೂ ಬೌದ್ಧಿಕ ವಿಕಸನಕ್ಕೆ ಅತ್ಯಂತ ಅದ್ಯತೆ ನೀಡಿದ್ದು, ಜನರಲ್ಲಿ ಸಂಶೋಧನೆಯ ಮನೋಭಾವನೆಯನ್ನು ಮೂಡಿಸುವ ವಿಶ್ವಕೋಶವನ್ನೇ ಶ್ರೀಗಳವರು ಸುತ್ತೂರಿನಲ್ಲಿ ಸ್ಥಾಪಿಸಿ, ಕರ್ನಾಟಕದಲ್ಲಿ ದೊಡ್ಡ ಶಿಕ್ಷಣ ಕ್ರಾಂತಿಯನ್ನೇ ಮಾಡಿದ್ದಾರೆ. "ಬೇರೆ ಸಂಸ್ಕೃತಿಯನ್ನು ಪ್ರೀತಿಸು, ನಿನ್ನ ಸಂಸ್ಕೃತಿಯಲ್ಲಿ ಜೀವಿಸು" ಎಂಬ ಗಾಂಧೀಜಿಯವರ ಮಾತನ್ನು ಉಲ್ಲೇಖಿಸುತ್ತಾ ನಮ್ಮ ಸಂಸ್ಕೃತಿಯನ್ನು ನಾವು ಪ್ರೀತಿಸಿ ಪೋಷಿಸಿದಾಗ ಮಾತ್ರ ಅದು ನಮ್ಮನ್ನು ಹೊಸ ಪ್ರಪಂಚಕ್ಕೆ ಕರೆದುಕೊಂಡು ಹೊಗುತ್ತದೆ. ಇದನ್ನು ನಾವು ಶ್ರೀಕ್ಷೇತ್ರ ಸುತ್ತೂರಿನಲ್ಲಿ ಕಾಣಬಹುದು ಎಂದರು. ಶ್ರೀಮಠದಲ್ಲಿ ಬಡ ಮತ್ತು ಅನಾಥ ಮಕ್ಕಳಿಗೆ ಉಚಿತ ಶಿಕ್ಷಣ ವಸತಿ ಹಾಗೂ ಅನ್ನದಾಸೋಹಗಳನ್ನು ಏರ್ಪಡಿಸಿ 21ನೇ ಶತಮಾನದಲ್ಲಿ ಹೊಸ ಕ್ರಾಂತಿಯನ್ನೇ ಮಾಡಿದ್ದಾರೆ. ಅದ್ದರಿಂದ ಸುತ್ತೂರು ಶ್ರೀಗಳವರ ಹೆಸರು ಅಜರಾಮರ. ವಿಶ್ವದಲ್ಲೇ ಇಂತಹ ಸಂಸ್ಥೆಗಳು ಬಹಳ ಅಪರೂಪ, ಇಲ್ಲಿ ವಿದ್ಯಾರ್ಥಿಗಳಿಗೆ ನೆಮ್ಮದಿ ಹಾಗೂ ಭಯಮುಕ್ತ ವಾತಾವರಣ ವಿದೆ ಎಂದು ಅಭಿಪ್ರಾಯಪಟ್ಟರು.



–ಹರ್ಷಿತಾ ಎಂ.



ತೇಜಸ್ವಿ ಎಚ್‌ಎಸ್‌ವಿ

ಜಾತ್ರಾ ಮಹೋತ್ಸವದ ಕಾರ್ಯಕ್ರಮಗಳ ಉದ್ಘಾಟನೆಯಲ್ಲಿ 85ನೇ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷರಾದ ಡಾ. ಎಚ್.ಎಸ್. ವೆಂಕಟೇಶಮೂರ್ತಿಯವರನ್ನು ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಅಭಿನಂದಿಸಿ–ಆಶೀರ್ವದಿಸಿದ ಸಂದರ್ಭದಲ್ಲಿ ಶ್ರೀಮತಿ ಗೌರಮ್ಮ, ಶ್ರೀಮತಿ ಮೋದಾಮಣಿ, ಶ್ರೀ ದಕ್ಷಿಣಾಮೂರ್ತಿ, ಶ್ರೀ ಬಿ.ಜೆ. ಪುಟ್ಟಸ್ವಾಮಿ, ಶ್ರೀ ಜೆ.ಸಿ. ಮಾಧುಸ್ವಾಮಿ, ಶ್ರೀಮತಿ ನಿರ್ಮಲಾ, ಡಾ. ಎಂ. ವೀರಪ್ಪಮೊಯ್ಲಿ, ಶ್ರೀ ಗೋವಿಂದ ಎಂ. ಕಾರಜೋಳ, ಶ್ರೀ ವೆಂಕಟರಮಣ, ಶ್ರೀ ವಾಸು, ಶ್ರೀಮತಿ ಪುಷ್ಪಾ ಜಗನ್ನಾಥ್, ಶ್ರೀ ಎಸ್.ಪಿ. ಮಂಜುನಾಥ್, ಡಾ. ಸಿ.ಜಿ. ಬೆಟಸೂರಮಠ ಇದ್ದಾರೆ.

## ಶರಣರು ಸಮ ಸಮಾಜದ ನಿರ್ಮಾತೃಗಳು: ಶ್ರೀ ಎಂ. ಗೋವಿಂದ ಕಾರಜೋಳ



ಜಾತ್ರಾ ಮಹೋತ್ಸವದ ಕೃಷಿ ಮೇಳ, ಸಾಂಸ್ಕೃತಿಕ ಮೇಳ ಹಾಗೂ ದೇಸಿ ಆಟಗಳನ್ನು ಉದ್ಘಾಟಿಸಿದ ಉಪ ಮುಖ್ಯಮಂತ್ರಿಗಳಾದ ಶ್ರೀ ಗೋವಿಂದ ಎಂ ಕಾರಜೋಳರವರು ಮಾತನಾಡಿ ಪ್ರಾಚೀನ ಕಾಲದ ಗುರುಕುಲ ಪದ್ಧತಿಯಲ್ಲಿ ಬ್ರಹ್ಮಜ್ಞಾನ ಬೋಧಿಸಲಾಗುತ್ತಿತ್ತು. ಕಾಲಕ್ರಮೇಣ ಮಾನವನ ಬೇಕುಬೇಡಗಳ ಅನುಸಾರ ಗುರುಕುಲಗಳು ಮಠಗಳಾಗಿ ಪರಿವರ್ತನೆಗೊಂಡವು. ಸಾವಿರಾರು ವರ್ಷಗಳಿಂದ ಮಾನವನ ಕಲ್ಯಾಣಕ್ಕಾಗಿ ಮಠಗಳು ಶ್ರಮಿಸುತ್ತಿವೆ. ಅದರಲ್ಲೂ ಶರಣರ ಬೀಡಾದ ಕರ್ನಾಟದಲ್ಲಿ ಬಸವಣ್ಣನವರು ಬಿಟ್ಟುಹೋದ ತತ್ವಗಳ ತೇರನ್ನು ಎಳೆಯಲು ಅನೇಕ ಮಠಗಳು ಪ್ರಯತ್ನಿಸುತ್ತಿವೆ. ಅದರಲ್ಲಿ ಸುತ್ತೂರು ಶ್ರೀಮಠವು ಸಹ ಒಂದಾಗಿದೆ. ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಪದ್ಧತಿಗಳನ್ನು ಜನರು ಅನುಸರಿಸುತ್ತಾರೆ. ಅದರಲ್ಲಿ ಭಾರತವು ಒಂದು. ಕರ್ನಾಟದಲ್ಲಿ ಅನೇಕ ಮಠಗಳು ಬಸವಣ್ಣನವರ ಕಾಯಕ ಮತ್ತು ದಾಸೋಹವನ್ನು ಅನುಷ್ಠಾನಗೊಳಿಸಿವೆ. 900 ವರ್ಷಗಳ ಹಿಂದೆ ದೇವರ ಹೆಸರಲ್ಲಿ ಮತ್ತು ಧರ್ಮದ ಹೆಸರಲ್ಲಿ ನಡೆಯುತ್ತಿರುವ ದೌರ್ಜನ್ಯವನ್ನು ತಡೆಯಲು ವಿಶ್ವಗುರು ಬಸವಣ್ಣನವರು ದುಡಿಯುವವರಿಗಾಗಿ, ನೊಂದವರಿಗಾಗಿ ಹೊಸ ಧರ್ಮವನ್ನು ಸ್ಥಾಪನೆ ಮಾಡಿದರು. ಆದರೆ ಇಂದು ನಾವು ಬಸವಣ್ಣನವರದು ಲಿಂಗಾಯತ ಧರ್ಮವೆನ್ನುತ್ತೇವೆ. ಬಸವಣ್ಣನವರು ವರ್ಗರಹಿತ ಸಮಾಜವನ್ನು ನಿರ್ಮಾಣ ಮಾಡಲು ಪ್ರಯತ್ನಿಸಿದರು. ನಾವೆಲ್ಲರೂ ಪ್ರಯತ್ನಪಟ್ಟರೆ ದೇಶದಲ್ಲಿ ಐಕ್ಯತೆಯನ್ನು ತರಬಹುದು ಎಂದು ಹೇಳಿದರು.

# ಆಹಾರವೇ ಔಷಧಿಯಾಗಬೇಕು ಔಷಧಿಯೇ ಆಹಾರವಾಗಬಾರದು



ಆಹಾರವನ್ನು ಔಷಧಿ ಪ್ರಮಾಣದಲ್ಲಿ ಸೇವಿಸಿದರೆ, ಔಷಧಿಯನ್ನು ಆಹಾರದ ಪ್ರಮಾಣದಲ್ಲಿ ಸೇವಿಸುವುದು ತಪ್ಪುತ್ತದೆ ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನಿರ್ದೇಶಕರಾದ ಡಾ.ಸಿ. ರಾಮಚಂದ್ರರವರು ಅಭಿಪ್ರಾಯ ಪಟ್ಟರು.

ಸದಾಕಾಲ ಖುಷಿಯಿಂದ ನಗುನಗುತ್ತಾ ಜೀವನ ನಡೆಸಬೇಕು. ಜನರಿಗೆ ಸಾಮಾನ್ಯ ಅರಿವು ಎಂಬುದು ಬಹಳ ಮುಖ್ಯ. ಕ್ರೀಡೆಗಳಲ್ಲಿ ಪಾಲ್ಗೊಳ್ಳುವುದು, ವ್ಯಾಯಾಮ, ಮಿತವಾದ ಆಹಾರ ಸೇವನೆ, ನೆಮ್ಮದಿಯ ಜೀವನವು ಮನುಷ್ಯನ ಆಯಸ್ಸನ್ನು ವೃದ್ಧಿ ಮಾಡುತ್ತದೆ. ಇಂತಹ ಜೀವನ ಕ್ರಮವು ಪ್ರತಿಯೊಬ್ಬರಲ್ಲಿಯು ಅತಿ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ ಎಂದು ಹೇಳಿದ ಅವರು ಎ.ಪಿ.ಜೆ. ಅಬ್ದುಲ್ ಕಲಾಂರವರ ಸರಳತೆ ಹಾಗೂ ಯಶೋಗಾಥೆಯನ್ನು ಶ್ಲಾಘಿಸಿದರು. ಕಿದ್ವಾಯಿ ಆಸ್ಪತ್ರೆಯು ಜನರ ಆರೋಗ್ಯಕ್ಕಾಗಿ ಶ್ರಮಿಸುತ್ತಿದೆ ಮುಂದಿನ ದಿನಗಳಲ್ಲಿ ಮೈಸೂರು ಹಾಗೂ ಹುಬ್ಬಳ್ಳಿ ಯಲ್ಲಿ ಆಸ್ಪತ್ರೆಯನ್ನು ತೆರೆಯುವುದಾಗಿ ಹೇಳಿದರು.

ಮಕ್ಕಳು ಭವ್ಯ ಭಾರತದ ಭಾವಿ ಪ್ರಜೆಗಳು ಹೀಗಾಗಿ ಮಕ್ಕಳಿಗಾಗಿ ಆಸ್ತಿಮಾಡುವುದನ್ನು ನಿಲ್ಲಿಸಿ ಒಳ್ಳೆಯ ಶಿಕ್ಷಣ, ಆರೋಗ್ಯ, ಪ್ರಮುಖವಾದ ಸೌಲಭ್ಯಗಳನ್ನು ಒದಗಿಸುವ ಮೂಲಕ ಅವರು ಉನ್ನತ ಜೀವನವನ್ನು ರೂಪಿಸಿಕೊಳ್ಳಲು ಸಹಾಯಕವಾಗುವಂತೆ ವ್ಯವಸ್ಥೆ ಕಲ್ಪಿಸಿಕೊಡಬೇಕೆಂದು ಪೋಷಕರಿಗೆ ಸಲಹೆ ನೀಡಿದರು.

– ಅನುಷ.ಪಿ

# ಸಾಂಸ್ಕೃತಿಕ ಮೇಳದಲ್ಲಿ ನವಿಲುಗಳ ನವಿರಾದ ನರ್ತನ



# ಜೀವನಪಾಠ ಕಲಿಸುವ ಕೃಷಿಮೇಳ



ಜಾತ್ರಾ ಮಹೋತ್ಸವದ ವಸ್ತುಪ್ರದರ್ಶನ, ಕೃಷಿಮೇಳ ಮತ್ತು ಸಾಂಸ್ಕೃತಿಕ ಮೇಳಗಳ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ, ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷರಾದ **ಶ್ರೀ ಬಿ.ಜೆ. ಪುಟ್ಟಸ್ವಾಮಿ**ರವರು ಮಾತನಾಡುತ್ತಾ, ಸುತ್ತೂರು ಜಾತ್ರೆ ವಸ್ತುಪ್ರದರ್ಶನ, ಕೃಷಿ ಮೇಳಗಳ ಮೂಲಕ ರೈತರಿಗೆ, ಸಾರ್ವಜನಿಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಉಪಯುಕ್ತ ಮಾಹಿತಿಯನ್ನು ನೀಡುತ್ತಿದ್ದು, ಕಲಿಕೆಯ ಪಾಠವಾಗಿದೆ. ಕೃಷಿ ಮೇಳದಲ್ಲಿ ಅಳವಡಿಸಿರುವ ಹನಿ ನೀರಾವರಿ ಪದ್ಧತಿ ರೈತರಿಗೆ ಒಂದು ಪಾಠ ಮಾತ್ರವಲ್ಲ ಅವರಿಗೆ ಸ್ಫೂರ್ತಿಯಾಗಿದೆ ಎಂದು ಅಭಿಪ್ರಾಯಪಟ್ಟರು. ವಸ್ತುಪ್ರದರ್ಶನದಲ್ಲಿ ಕೃಷಿ ಮತ್ತು ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ವಿವಿಧ ಮಾಹಿತಿಗಳು ಲಭ್ಯವಿದ್ದು, ಎಲ್ಲರೂ ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದರು.

–ಕೃಷ್ಣಮಾಧುರಿ

# ಸರ್ಕಾರದ ಯೋಜನೆಗಳ ಮಾಹಿತಿ

ಜಾತ್ರಾ ಮಹೋತ್ಸವು ಒಂದಲ್ಲಾ ಒಂದು ವಿಶೇಷತೆಯಿಂದ ಕೂಡಿರುತ್ತದೆ. ಪ್ರತಿ ವರ್ಷದಂತೆ ಈ ಬಾರಿ ಭಕ್ತಾದಿಗಳಿಗೆ ಮತ್ತು ರೈತರಿಗೆ ಅನುಕೂಲವಾಗುವಂತೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಹಿತಿ ಕೇಂದ್ರವನ್ನು ತೆರೆಯಲಾಗಿದೆ. ಇಲ್ಲಿಗೆ ಭೇಟಿ ನೀಡಿದ ಪ್ರತಿಯೊಬ್ಬರಿಗೂ ಸರ್ಕಾರದ ಯೋಜನೆಗಳ ಬಗ್ಗೆ ತಿಳಿಸಿಕೊಡಲಾಗುತ್ತದೆ. ಈ ಮಾಹಿತಿ ಕೇಂದ್ರದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೀಡಿರುವ ಹಲವಾರು ಯೋಜನೆಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.

ಸರ್ಕಾರದ ಎಲ್ಲಾ ಯೋಜನೆಗಳ ಬಗ್ಗೆ ಪ್ರತಿಯೊಬ್ಬರು ತಿಳಿಯಬೇಕೆಂಬುದು ಮಾಹಿತಿ ಕೇಂದ್ರದ ಉದ್ದೇಶವಾಗಿದೆ.




ಇಲ್ಲಿ ಕಾರ್ಮಿಕ ಇಲಾಖೆ, ವಸತಿ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ, ಸಪ್ತಪದಿ–ಸಾಮೂಹಿಕ ವಿವಾಹ, ತೋಟಗಾರಿಕೆ, ಜಲಾನಯನ ಅಭಿವೃದ್ಧಿ, ಕಲ್ಯಾಣ ಕರ್ನಾಟಕ ಪರ್ವಕ್ಕೆ ಚಾಲನೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಮುಖ್ಯಮಂತ್ರಿಗಳ ನವ ನಗರೋತ್ಥಾನ ಯೋಜನೆ, ಸಣ್ಣ ನೀರಾವರಿ, ಪಶುಪಾಲನಾ ಇಲಾಖೆ, ಮೀನುಗಾರರ ಸಾಲಮನ್ನಾ, ನೇಕಾರರ ಸಾಲಮನ್ನಾ, ಮಾಹಿತಿ ತಂತ್ರಜ್ಞಾನ ಕ್ಷೇತ್ರ, ಕೈಗಾರಿಕೆಗಳ ಉತ್ತೇಜನ, ಪ್ರವಾಸ ಸಂತ್ರಸ್ಥರ ನೋವಿಗೆ ಪರಿಹಾರ ಹೀಗೆ ಹಲವಾರು ವಿವಿಧ ಯೋಜನೆಗಳು ಮತ್ತು ಇಲಾಖೆಗಳ ಬಗ್ಗೆ ಮಾಹಿತಿ ಕೇಂದ್ರದಲ್ಲಿ ಪ್ರದರ್ಶಿಸಲಾಗಿದೆ. ಶ್ರೀ ಎಸ್.ಎನ್. ಸಿದ್ಧರಾಮಪ್ಪ, ಆಯುಕ್ತರು, ವಾರ್ತಾ ಇಲಾಖೆ ಸಂಪರ್ಕ ಮತ್ತು ಶ್ರೀ ಬಸವರಾಜು ಕಂಬಿ, ಜಂಟಿ ನಿರ್ದೇಶಕರು, ವಾರ್ತಾ ಇಲಾಖೆ ಸಂಪರ್ಕ, ಇವರು ಇಲ್ಲಿನ ಉಸ್ತುವಾರಿ ವಹಿಸಿಕೊಂಡು ಮಾಹಿತಿ ನೀಡುತ್ತಿದ್ದಾರೆ.– ತೇಜ



**ಮೈಸೂರು ಮಹಾನಗರ ಪಾಲಿಕೆಯ ನೂತನ ಮೇಯರ್‌ರವರಾದ ಶ್ರೀಮತಿ ತಸ್ಲೀಮ್‌ರವರು ಸುತ್ತೂರು ಶ್ರೀಕ್ಷೇತ್ರದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಆಶೀರ್ವಾದ ಪಡೆಯುತ್ತಿರುವುದು. ಚಿತ್ರದಲ್ಲಿ ಶ್ರೀ ಕೆ.ವಿ. ಮಲ್ಲೇಶ್ ಹಾಗೂ ಶ್ರೀ ರೆಹಮತುಲ್ಲಾರವರಿದ್ದಾರೆ.**

## ಶ್ರೀವೀರಭದ್ರೇಶ್ವರಸ್ವಾಮಿ ಕೊಂಡೋತ್ಸವ

ಮಂಗಳವಾರ ಸಂಜೆ ಶ್ರೀವೀರಭದ್ರೇಶ್ವರಸ್ವಾಮಿ ಕೊಂಡೋತ್ಸವವು ಪರಮ ಪೂಜ್ಯ ಜಗದ್ಗುರುಗಳವರ ದಿವ್ಯ ಸಾನಿಧ್ಯದಲ್ಲಿ ವಿಜೃಂಭಣೆಯಿಂದ ನೇರವೇರಿತು. ಈ ಸಂದರ್ಭದಲ್ಲಿ ಅನೇಕ ಹರಗುರು ಚರ ಮೂರ್ತಿಗಳು ಹಾಗೂ ನಾಡಿನ ಅನೇಕ ಗಣ್ಯ ಅಥಿತಿಗಳು ಪಾಲ್ಗೊಂಡಿದ್ದರು. ಸುತ್ತಮುತ್ತಲಿನ ಗ್ರಾಮಗಳಾದ ಬೆಳಗುಂದ, ಕಲ್ಮಳ್ಳಿ, ಬಿಳಿಗೆರೆ, ಸುತ್ತೂರು, ಕುಪ್ಪರವಳ್ಳಿ, ಸೋನಹಳ್ಳಿ, ಕಿರುಗುಂದ ಮತ್ತು ಕನಕನಗರ ಗ್ರಾಮಗಳ ಭಕ್ತಾದಿಗಳು ಸಹಸ್ರ ಸಂಖ್ಯೆಯಲ್ಲಿ ಪಾಲ್ಗೊಂಡು ಶ್ರೀವೀರಭದ್ರೇಶ್ವರಸ್ವಾಮಿ ದೇವರ ಕೃಪೆಗೆ ಪಾತ್ರರಾದರು.



ಇದಕ್ಕೂ ಮುನ್ನ ಮುಂಜಾನೆ ಶ್ರೀ ವೀರಭದ್ರೇಶ್ವರ ಸ್ವಾಮಿಯ ಸನ್ನಿಧಿಯಲ್ಲಿ ವಿಶೇಷ ಪೂಜಾ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.

ನಂತರ ಕೊಂಡೋತ್ಸವದ ಗುಳಿಯನ್ನು ನಿರ್ಮಿಸಲು ಭೂಮಿ ಪೂಜೆಯನ್ನು ಬೆಳಗ್ಗೆ 10.00 ಕ್ಕೆ ನೇರವೇರಿಸಲಾಯಿತು.

ಮಧ್ಯಾಹ್ನ 12.00 ಗಂಟೆಗೆ ಅಗ್ನಿಸ್ಪರ್ಶ ಮಾಡಲಾಯಿತು.

ಈ ಸಂದರ್ಭದಲ್ಲಿ ವಾಟಾಳು ಮಠದ ಪೂಜ್ಯ ಶ್ರೀ ಸಿದ್ದಲಿಂಗಶಿವಾಚಾರ್ಯ ಸ್ವಾಮಿಗಳವರು ಹಾಗೂ ಹರಗುರು ಚರಮೂರ್ತಿಗಳು, ಭಕ್ತರು ಭಾಗವಹಿಸಿದ್ದರು.

# ಈ ಬಂಧ ಅನುಬಂಧ: ಇಂದಿವರಿಗೆ ವಿವಾಹಬಂಧ

ಸುತ್ತೂರಿನಲ್ಲಿ ಜಾತ್ರಾ ಮಹೋತ್ಸವದ ಅಂಗವಾಗಿ ಬುಧವಾರದಂದು ನಡೆಯಲಿರುವ ಸಾಮೂಹಿಕ ವಿವಾಹದಲ್ಲಿ 178 ಜೋಡಿಗಳು ಸಪ್ತಪದಿ ತುಳಿಯಲಿದ್ದಾರೆ. ಪ್ರತಿ ವರ್ಷವು ಜಾತ್ರೆಯಲ್ಲಿ ಜಾತಿ–ಮತ ಭೇದವಿಲ್ಲದೆ ನಡೆಯುತ್ತಿರುವ ಸಾಮೂಹಿಕ ವಿವಾಹವು ಎಲ್ಲರೂ ಒಂದೇ ಎನ್ನುವ ಐಕ್ಯತೆಯನ್ನು ಸಾರುವುದಕ್ಕೆ ಸಾಕ್ಷಿಯಾಗಿದೆ. ಇದರಲ್ಲಿ ತಮಿಳುನಾಡಿನ 2 ಜೋಡಿಗಳು ಮದುವೆಯಾಗುತ್ತಿರುವುದು ವಿಶೇಷವಾಗಿದೆ. ಜೊತೆಗೆ ಅಂಗವಿಕಲತೆ ಎನ್ನುವುದು ದೇಹಕ್ಕೆ ಮಾತ್ರ ಮನಸ್ಸಿಗಲ್ಲ ಎನ್ನುವಂತೆ 5 ವಿಶೇಷಚೇತನ ಜೋಡಿಗಳು ನವ ಜೀವನಕ್ಕೆ ಕಾಲಿಡುತ್ತಿದ್ದಾರೆ. ಇಂದಿನ ಮದುವೆ ಕಾರ್ಯಕ್ರಮದಲ್ಲಿ ಪರಿಶಿಷ್ಟ ಜಾತಿಯ 106 ಜೋಡಿಗಳು, ಹಿಂದುಳಿದ ವರ್ಗದ 33 ಜೋಡಿಗಳು, ಅಂತರ್ಜಾತಿಯ 18 ಜೋಡಿಗಳು, ವೀರಶೈವ–ಲಿಂಗಾಯತ 11 ಜೋಡಿಗಳು, ಪರಿಶಿಷ್ಟ ಪಂಗಡದ 10 ಜೋಡಿಗಳು ಅಲ್ಲದೆ ವಿಧುರ ವಿಧವೆ 2 ಜೋಡಿಗಳು ಮತ್ತೆ ಮದುವೆಯಾಗಿ ಸಮಾಜಕ್ಕೆ ಆದರ್ಶವಾಗಿ ನಿಲ್ಲುತ್ತಿರುವುದು ಸಾಮೂಹಿಕ ವಿವಾಹದ ಮತ್ತೊಂದು ವಿಶೇಷವಾಗಿದೆ. ನವ ದಾಂಪತ್ಯಕ್ಕೆ ಕಾಲಿಡುತ್ತಿರುವ ಈ ಎಲ್ಲ ಜೋಡಿಗಳು ಜೀವನದಲ್ಲಿ ಸುಖ ಶಾಂತಿ ನೆಮ್ಮದಿಯಿಂದ ಬಾಳುವಂತಾಗಲಿ ಎಂದು ಎಲ್ಲರ ಹಾರೈಕೆಯಾಗಿದೆ.

ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಕಳೆದ ಹತ್ತೊಂಬತ್ತು ವರ್ಷಗಳಿಂದ ಸಾಮೂಹಿಕ ವಿವಾಹವನ್ನು ನಡೆಸಿಕೊಂಡು ಬರಲಾಗುತ್ತಿದೆ. ಈ ಕಾರ್ಯಕ್ರಮದಲ್ಲಿ ಇದುವರೆಗೆ 2789ಕ್ಕೂ ಹೆಚ್ಚು ಜೋಡಿ ವಧುವರರು ದಾಂಪತ್ಯ ಜೀವನಕ್ಕೆ ಕಾಲಿರಿಸಿದ್ದಾರೆ. ಎಲ್ಲ ಧರ್ಮ ಮತ್ತು ಜಾತಿಗಳವರೂ ಇದರಲ್ಲಿ ಪಾಲ್ಗೊಳ್ಳಲು ಮುಕ್ತ ಅವಕಾಶವಿದೆ.

ಸಾಮೂಹಿಕ ವಿವಾಹ ಜಾತ್ರಾ ಸಂದರ್ಭದಲ್ಲಿ ಮಾತ್ರವಲ್ಲದೆ, ಸುತ್ತೂರು ಶ್ರೀಕ್ಷೇತ್ರದಲ್ಲಿ 2009 ರಿಂದಲೂ ಪ್ರತಿ ತಿಂಗಳು ಸಾಮೂಹಿಕ ವಿವಾಹವನ್ನು ನಡೆಸಲಾಗುತ್ತಿದೆ. ಈವರೆಗೆ 249ಕ್ಕೂ ಹೆಚ್ಚು ವಿವಾಹಗಳು ನೆರವೇರಿವೆ.

ವಿವಾಹಕ್ಕೆ ಆಗಮಿಸುವವರಿಗೆ ಶ್ರೀಮಠದಲ್ಲಿ ಪ್ರಸಾದದ ವ್ಯವಸ್ಥೆ ಇರುತ್ತದೆ. ವಿವಾಹದ ವಿಧಿ ವಿಧಾನಗಳನ್ನು ಶಾಸ್ತ್ರೋಕ್ತವಾಗಿ ನೆರವೇರಿಸಲಾಗುತ್ತಿದೆ. ಆಸಕ್ತಿಯುಳ್ಳವರು ಈ ಸದಾವಕಾಶವನ್ನು ಬಳಸಿಕೊಳ್ಳಬಹುದಾಗಿದೆ. ಸಾಮೂಹಿಕ ವಿವಾಹಗಳಿಗೆ ದಾನಿಗಳು ಹಾಗೂ ಸಾರ್ವಜನಿಕರು ಸಹಾಯ ನೀಡುತ್ತಿದ್ದಾರೆ. ಹಾಗೆ ನೀಡಲಿಚ್ಛಿಸುವ ದಾನಿಗಳು ಸುತ್ತೂರು ಶ್ರೀಮಠದ ಕಛೇರಿಯನ್ನು ಸಂಪರ್ಕಿಸಲು ಕೋರಿದೆ.

## ಜಾತ್ರಾ ಮಹೋತ್ಸವ

### ಶ್ರೀ ಕ್ಷೇತ್ರದಲ್ಲಿಂದು

**ಸಾಮೂಹಿಕ ವಿವಾಹ** ಬೆಳಗ್ಗೆ 10.00

**ಸಮ್ಮುಖ :** ನಿ.ಪ್ರ.ಸ್ವ.ಡಾ. ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳು, ಶ್ರೀ ದೇಗುಲ ಮಠ, ಕನಕಪುರ, ರಾಜರ್ಷಿ ಡಾ. ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು, ಧರ್ಮಾಧಿಕಾರಿಗಳು, ಶ್ರೀಕ್ಷೇತ್ರ ಧರ್ಮಸ್ಥಳ. **ಅಧ್ಯಕ್ಷತೆ :** ಡಾ. ಶಾಮನೂರು ಶಿವಶಂಕರಪ್ಪ, ಶಾಸಕರು, ಮಾಜಿ ಸಚಿವರು, ಅಧ್ಯಕ್ಷರು, ಅ.ಭಾ.ವೀ.ಮಹಾಸಭಾ. **ಉದ್ಘಾಟನೆ :** ಶ್ರೀ ಹೆಚ್.ಡಿ. ದೇವೇಗೌಡ, ಮಾಜಿ ಪ್ರಧಾನಮಂತ್ರಿಗಳು. **ಮಾಂಗಲ್ಯ ವಿತರಣೆ :** ಶ್ರೀ ಆರ್. ಅಶೋಕ್, ಕಂದಾಯ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳ ಸಚಿವರು. **ಪ್ರತಿಜ್ಞಾವಿಧಿ ಬೋಧನೆ :** ಶ್ರೀ ಮುಕುಂದ್, ಮಹಾ ಜಂಟಿಕಾರ್ಯದರ್ಶಿಗಳು, ರಾಷ್ಟ್ರೀಯ ಸ್ವಯಂಸೇವಕ ಸಂಘ. **ಪರಿಕರ ವಿತರಣೆ :** ಶ್ರೀ ಎಸ್.ಆರ್. ಪಾಟೀಲ್, ವಿರೋಧಪಕ್ಷದ ನಾಯಕರು, ಕರ್ನಾಟಕ ವಿಧಾನ ಪರಿಷತ್. **ಪ್ರಮಾಣಪತ್ರ ವಿತರಣೆ :** ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಮುಜರಾಯಿ, ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು. **ಮುಖ್ಯ ಅತಿಥಿಗಳು :** ಶ್ರೀ ಅಲ್ಲಂ ವೀರಭದ್ರಪ್ಪ, ಶಾಸಕರು, ಮಾಜಿ ಸಚಿವರು, ಶ್ರೀ ಅರವಿಂದ್ ಸಿ. ಬೆಲ್ಲದ್, ವಿಧಾನಸಭಾ ಸದಸ್ಯರು, ಧಾರವಾಡ, ಶ್ರೀ ಕೆ.ಎಸ್. ಲಿಂಗೇಶ್, ವಿಧಾನಸಭಾ ಸದಸ್ಯರು, ಬೇಲೂರು, ಶ್ರೀ ಜಿ. ರಘು ಆಚಾರ್, ವಿಧಾನಪರಿಷತ್ ಸದಸ್ಯರು, ಚಿತ್ರದುರ್ಗ, ಶ್ರೀ ಕೆ.ಟಿ. ಶ್ರೀಕಂಠೇಗೌಡ, ವಿಧಾನಪರಿಷತ್ ಸದಸ್ಯರು, ಮಂಡ್ಯ, ಶ್ರೀ ಎಸ್.ಎಸ್. ಗಣೇಶ್, ಉದ್ಯಮಿಗಳು, ದಾವಣಗೆರೆ, ಶ್ರೀಮತಿ ರೇಖಾ ಗಣೇಶ್, ದಾವಣಗೆರೆ

**ರಾಜ್ಯಮಟ್ಟದ ಭಜನಾ ಮೇಳ : ಉದ್ಘಾಟನೆ** ಸಂಜೆ 4.00ಕ್ಕೆ

**ಸಮ್ಮುಖ :** ಜಗದ್ಗುರು ಶ್ರೀ ದಯಾನಂದಪುರಿ ಮಹಾಸ್ವಾಮಿಗಳು, ಶ್ರೀ ಗಾಯತ್ರಿಪೀಠ ಮಹಾಸಂಸ್ಥಾನ, ಹೇಮಕೂಟ, ಹಂಪಿ, ಶ್ರೀ ಗುರುಪರದೇಶಿಕೇಂದ್ರ ಮಹಾಸ್ವಾಮಿಗಳು, ಶ್ರೀ ಕೆರಗೋಡಿ–ರಂಗಾಪುರ ಸುಕ್ಷೇತ್ರ, ತಿಪಟೂರು, ಶ್ರೀ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್, ಅಧ್ಯಕ್ಷರು, ಶ್ರೀ ರಾಮಕೃಷ್ಣ ಮಠ, ಮೈಸೂರು. **ಅಧ್ಯಕ್ಷತೆ :** ಡಾ. ಹೆಚ್.ಸಿ. ಮಹದೇವಪ್ಪ, ಮಾಜಿ ಸಚಿವರು. **ಉದ್ಘಾಟನೆ :** ಶ್ರೀ ಸಿದ್ದರಾಮಯ್ಯ, ವಿರೋಧಪಕ್ಷದ ನಾಯಕರು, ಮಾಜಿ ಮುಖ್ಯಮಂತ್ರಿಗಳು. **ಮುಖ್ಯ ಅತಿಥಿಗಳು :** ಶ್ರೀ ಎಂ.ಬಿ. ಪಾಟೀಲ್, ಶಾಸಕರು, ಮಾಜಿ ಸಚಿವರು, ಡಾ. ಪ್ರಭಾಕರ ಬ. ಕೋರೆ, ರಾಜ್ಯಸಭಾ ಸದಸ್ಯರು, ಶ್ರೀ ಯು.ಟಿ. ಖಾದರ್, ಶಾಸಕರು, ಮಾಜಿ ಸಚಿವರು, ಶ್ರೀ ಎಸ್.ಎ. ರಾಮದಾಸ್, ಶಾಸಕರು, ಮಾಜಿ ಸಚಿವರು, ಶ್ರೀ ಸಿ. ಪುಟ್ಟರಂಗಶೆಟ್ಟಿ, ಶಾಸಕರು, ಮಾಜಿ ಸಚಿವರು, ಶ್ರೀ ಪಿ.ಎಂ. ನರೇಂದ್ರಸ್ವಾಮಿ, ಮಾಜಿ ಸಚಿವರು, ಶ್ರೀ ಬಿ. ಹರ್ಷವರ್ಧನ್, ವಿಧಾನಸಭಾ ಸದಸ್ಯರು, ನಂಜನಗೂಡು, ಡಾ. ಗೀತಾ ಮಹದೇವಪ್ರಸಾದ್, ಮಾಜಿ ಸಚಿವರು, ಶ್ರೀ ವಿ. ಯಶವಂತ್, ಪ್ರಾದೇಶಿಕ ಆಯುಕ್ತರು, ಮೈಸೂರು, ಶ್ರೀ ವಿಪುಲ್ ಕುಮಾರ್, ಆರಕ್ಷಕ ಮಹಾನಿರೀಕ್ಷಕರು, ದಕ್ಷಿಣ ವಲಯ

# ರಂಗು ರಂಗಿನ ರಂಗೋಲಿ ಸ್ಪರ್ಧೆ : ಬಹುಮಾನ

ಜಾತ್ರಾ ಮಹೋತ್ಸವದ ಅಂಗವಾಗಿ ವಸ್ತು ಪ್ರದರ್ಶನದ ಆವರಣದಲ್ಲಿ ರಂಗೋಲಿ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. 37 ಮಹಿಳೆಯರು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ತೀರ್ಪುಗಾರರಾಗಿ ಶ್ರೀಮತಿ ಸುಧಾ ಮೃತ್ಯುಂಜಯಪ್ಪ, ಶ್ರೀ ಹೇಮಂತ್ ರಾಜ್ ಮತ್ತು ಶ್ರೀಮತಿ ಸವಿತಾ ಲೋಕೇಶ್ ಇವರುಗಳು ಭಾಗವಹಿಸಿದ್ದರು. ಶ್ರೀಮತಿ ಜಮುನಾ ಅರಸ್‌ರವರು ರಂಗೋಲಿ ಸ್ಪರ್ಧೆಯ ಸಂಚಾಲಕರಾಗಿದ್ದರು.






ರಂಗೋಲಿ ಸ್ಪರ್ಧೆಯ ವಿಜೇತರೊಂದಿಗೆ ತೀರ್ಪುಗಾರರು ಹಾಗೂ ಸಂಚಾಲಕರು

ಸ್ಪರ್ಧಿಗಳನ್ನು ಎರಡು ತಂಡಗಳಾಗಿ ವಿಭಜಿಸಲಾಗಿತ್ತು. ಇಪ್ಪತ್ತು ವರ್ಷ ಮೇಲ್ಪಟ್ಟ ಮಹಿಳೆಯರ ವಿಭಾಗದಲ್ಲಿ ಮಂಡ್ಯದ ಶ್ರೀಮತಿ ಹೆಚ್.ಡಿ.ರೋಜರವರು ಪ್ರಥಮ ಬಹುಮಾನ, ಮೈಸೂರಿನ ಶ್ರೀಮತಿ ಸಾವಿತ್ರಿ ಸುಧಾಕರ್‌ರವರು ದ್ವಿತೀಯ ಬಹುಮಾನ, ನಂಜನಗೂಡಿನ ಶ್ರೀಮತಿ ರೇಣುಕಾದೇವಿರವರು ತೃತೀಯ ಬಹುಮಾನ ಮತ್ತು ಮೈಸೂರಿನ ಶ್ರೀಮತಿ ಜಾನಕಮ್ಮ ಇವರುಗಳು ಸಮಾಧಾನಕರ ಬಹುಮಾನಗಳನ್ನು ಗಳಿಸಿಕೊಂಡರು. ಶಾಲಾ ಮಟ್ಟದಲ್ಲಿ ಆಯೋಜಿಸಿದ್ದ ಮಕ್ಕಳ ರಂಗೋಲಿ ಸ್ಪರ್ಧೆಯಲ್ಲಿ ಸುತ್ತೂರಿನ ಜೆಎಸ್‌ಎಸ್ ಶಾಲೆಯ ವಿದ್ಯಾರ್ಥಿನಿ ಕು. ವರ್ಷಿತರವರು ಪ್ರಥಮ ಬಹುಮಾನ, ಕು. ಅಮೃತರವರು ದ್ವಿತೀಯ ಬಹುಮಾನ, ಮಂಡ್ಯದ ಕು. ಹೆಚ್.ಡಿ.ಸ್ಪಂದನರವರು ತೃತೀಯ ಬಹುಮಾನ ಮತ್ತು ಜೆಎಸ್‌ಎಸ್ ಶಾಲೆಯ ಕು.ಹೇಮಪ್ರಭ ಸಮಾಧಾನಕರ ಬಹುಮಾನಗಳನ್ನು ಪಡೆದುಕೊಂಡರು. ಸ್ಪರ್ಧೆಯಲ್ಲಿನ ರಂಗೋಲಿಗಳು ರಂಗು ರಂಗಾಗಿ ಕಂಗೊಳಿಸುತ್ತಿದ್ದವು. ಸ್ಪರ್ಧಿಗಳು ಉತ್ಸಾಹದಿಂದ ಪಾಲ್ಗೊಂಡಿದ್ದರು. – **ಸಂಕ್ರಾಂತಿ ಬಸವಟ್ಟಿ**



ಜಾತ್ರಾ ಮಹೋತ್ಸವ

**ಪೂಜೆ – ಉತ್ಸವ**

**22 ಜನವರಿ 2020 ಬುಧವಾರ**

| | |
|---|---|
| **ಪ್ರಾತಃಕಾಲ 4.00** | : **ಕರ್ತೃಗದ್ದುಗೆ** : ಮಹಾರುದ್ರಾಭಿಷೇಕ ಶ್ರೀ ನಂಜುಂಡೇಶ್ವರ, ನಂದಿ ಹಾಗೂ ವಿನಾಯಕ ಮೂರ್ತಿಗಳ ಪ್ರತಿಷ್ಠಾಪನೆ |
| **ಬೆಳಗ್ಗೆ 6.00** | : ಲಕ್ಷಬಿಲ್ವಾರ್ಚನೆ ಪ್ರಾರಂಭ |
| **ಬೆಳಗ್ಗೆ 7.00** | : ಹಸಿರುವಾಣಿ ಅಲಂಕಾರ ಮಹಾಮಂಗಳಾರತಿ |
| **ಬೆಳಗ್ಗೆ 7.30** | : **ಸುತ್ತೂರು** : ಸ್ನೇಹ–ಸೌಹಾರ್ದ–ಶಾಂತಿ ಪ್ರಾರ್ಥನಾ ಪಥಸಂಚಲನ |
| **ಬೆಳಗ್ಗೆ 8.30** | : ಶ್ರೀ ನಂಜುಂಡೇಶ್ವರ, ನಂದಿ ಹಾಗೂ ವಿನಾಯಕ ಸನ್ನಿಧಿ : ಮಹಾಮಂಗಳಾರತಿ |
| **ಬೆಳಗ್ಗೆ 9.00** | : **ಕರ್ತೃಗದ್ದುಗೆ** : ಷಟ್‌ಸ್ಥಲ ಧ್ವಜಾರೋಹಣ : ನಿ.ಪ್ರ.ಸ್ವ. ಶ್ರೀ ಚಿದಾನಂದಸ್ವಾಮಿಗಳು, ಶ್ರೀ ಹೊಸಮಠ, ಮೈಸೂರು **ಧರ್ಮಸಂದೇಶ** : ಷ.ಬ್ರ.ಶ್ರೀ ಚನ್ನರುದ್ರಮುನಿ ಶಿವಾಚಾರ್ಯ ಸ್ವಾಮಿಗಳು, ಶ್ರೀ ರುದ್ರಮುನೀಶ್ವರ ಮಠ, ಸೂಗೂರು, ಕಲಬುರಗಿ ಜಿಲ್ಲೆ |
| **ಬೆಳಗ್ಗೆ 9.00** | : ಶ್ರೀ ಸೋಮೇಶ್ವರ ಸನ್ನಿಧಿ ಅಷ್ಟೋತ್ತರ ಶತಕುಂಭಾಭಿಷೇಕ ಮಹಾಮಂಗಳಾರತಿ |
| **ಬೆಳಗ್ಗೆ 10.45** | : ಸಹಸ್ರಕುಂಭೋತ್ಸವ (ಹಾಲ್ಹರವಿ ಉತ್ಸವ) ಶ್ರೀ ಸೋಮೇಶ್ವರಸ್ವಾಮಿ ಉತ್ಸವ |
| **ಬೆಳಗ್ಗೆ 11.00** | : ಕರ್ತೃಗದ್ದುಗೆ : ಮಹಾರುದ್ರಾಭಿಷೇಕ |
| **ಮಧ್ಯಾಹ್ನ 12.00** | : ಮಹಾಮಂಗಳಾರತಿ |
| **ಸಂಜೆ 6.00** | : ಕ್ಷೀರಾಭಿಷೇಕ ಮತ್ತು ಮಹಾರುದ್ರಾಭಿಷೇಕ |
| **ರಾತ್ರಿ 7.30** | : ಮಹಾಮಂಗಳಾರತಿ |


# ಸ್ವಯಂಸೇವಕರ ಸೇವೆ ಮೆಚ್ಚುವಂತದ್ದು

ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ವಿವಿಧ ವಿಭಾಗಗಳಲ್ಲಿ ಸರ್ಕಾರಿ ಹಾಗೂ ಜೆಎಸ್‌ಎಸ್ ಸಂಸ್ಥೆಗಳ ಕಾಯಕ ಬಂಧುಗಳು ತಮಗೆ ಸಂಬಂಧಿಸಿದ ಜವಾಬ್ದಾರಿಯನ್ನು ಶ್ರದ್ಧಾಭಕ್ತಿಯಿಂದ ನಿರ್ವಹಿಸುತ್ತಿರುವುದು ಜಾತ್ರೆಯ ಯಶಸ್ಸಿಗೆ ಕಾರಣವಾಗಿದೆ ಎಂದರೆ ತಪ್ಪಾಗದು. ಜಾತ್ರೆಯಲ್ಲಿ ವಸತಿ ವ್ಯವಸ್ಥೆ, ಸಾಮೂಹಿಕ ವಿವಾಹ, ದಾಸೋಹ, ಶುಚಿತ್ವ, ಭದ್ರತೆ, ವಸ್ತುಪ್ರದರ್ಶನ, ಕೃಷಿಮೇಳ, ಸಾಂಸ್ಕೃತಿಕ ವೇದಿಕೆ, ದನಗಳ ಜಾತ್ರೆಗಳಲ್ಲದೆ ಸ್ಪರ್ಧೆಗಳಾದ ಚಿತ್ರಕಲೆ, ದೇಸಿ ಆಟಗಳು ಹಾಗೂ ಭಜನಾ ಮೇಳ, ಸೋಬಾನೆ ಪದ ಇವೇ ಮೊದಲಾದ ಹಲವಾರು ವಿಭಾಗಗಳಲ್ಲಿ ಸ್ವಯಂಸೇವಕರಾಗಿ ನೌಕರ ಬಂಧುಗಳು ಸೇವೆ ಸಲ್ಲಿಸುತ್ತಿರುವುದಲ್ಲದೇ, ನಿವೃತ್ತ ನೌಕರರು ಸಹ ಪ್ರತಿ ವರ್ಷ ಜಾತ್ರೆಯಲ್ಲಿ ಹೆಚ್ಚು ಉತ್ಸಾಹದಿಂದ ಸ್ವಯಂ ಸೇವಕರಾಗಿ ಪಾಲ್ಗೊಳ್ಳುತ್ತಿರುವುದು ಕಾರ್ಯಕ್ರಮಗಳು ಅಚ್ಚುಕಟ್ಟಾಗಿ ನಡೆಯಲು ಸಹಕಾರಿಯಾಗಿದೆ. – **ಜಿ.ಎಸ್. ಅನನ್ಯ**



ನಂಜನಗೂಡಿನಲ್ಲಿ ಸುತ್ತೂರು ವಾರ್ತೆಯನ್ನು ಹಂಚುತ್ತಿರುವ ಪವನ್

## ಜಾತ್ರೆಯೊಳಗೊಂದು ಸುತ್ತು



ಮೊದಲ ಬಾರಿ ಸುತ್ತೂರಿಗೆ ಬಂದಿದ್ದೇನೆ, ಮಾಧ್ಯಮಗಳು ಹಾಗೂ ಸಾರ್ವಜನಿಕರು ಸುತ್ತೂರಿನ ಜಾತ್ರೆ ಬಗ್ಗೆ ವರ್ಣಿಸುವುದನ್ನು ಕೇಳಿದ್ದೆ, ಆದರೆ ನಿಜಕ್ಕೂ ಈ ಜಾತ್ರೆ ನೋಡಲು ಇಷ್ಟವಾಯಿತು. ನಾವು ಒಟ್ಟಿಗೆ 48 ಮಂದಿ ಬಂದು ವಸತಿ ಗೃಹದಲ್ಲಿ ನೆಲೆಸಿದ್ದೇವೆ. ಇಲ್ಲಿ ಎಲ್ಲವೂ ವ್ಯವಸ್ಥಿತವಾಗಿದೆ. – **ಶ್ರೀ ಅಂದಾನಪ್ಪ, ಧಾರವಾಡ**

* * *



ಜಾತ್ರೆಗೆ ಕಳೆದ ವರ್ಷದಿಂದ ಬರುತ್ತಿದ್ದೇನೆ, ಈ ಜಾತ್ರೆಯ ವಿಶೇಷತೆ ಎಂದರೆ ಎಲ್ಲಾ ಸ್ವಾಮಿಗಳವರ ಆಶೀರ್ವಾದ ಇಲ್ಲಿ ಪಡೆಯಬಹುದು. ಇಲ್ಲಿ ನಡೆಯುವ ಎಲ್ಲಾ ಕಾರ್ಯಕ್ರಮಗಳು ಮಾಹಿತಿಪೂರ್ಣವಾಗಿವೆ. – **ಶ್ರೀ ವೀರಪುಟ್ಟಸ್ವಾಮಿ, ಮಳವಳ್ಳಿ ತಾ.**

* * *



ಜಾತ್ರೆ ಎಂದರೆ ಮೊದಲು ನೆನಪಾಗುವುದು ಸುತ್ತೂರು ಜಾತ್ರೆ. ಹತ್ತು ವರ್ಷಗಳಿಂದ ಇಲ್ಲಿ ವ್ಯಾಪಾರ ಮಾಡುತ್ತಿದ್ದೇನೆ. ಬೇರೆ ಜಾತ್ರೆಗಳಿಗಿಂತ ಸುತ್ತೂರಿನ ಜಾತ್ರೆ ಸಂಭ್ರಮ ಸಡಗರದಿಂದ ನಡೆಯುತ್ತದೆ. ಪ್ರತಿ ವರ್ಷವು ಇಲ್ಲಿ ವಿಶೇಷತೆಯನ್ನು ಕಾಣಬಹುದು ಮತ್ತು ಇಲ್ಲಿ ಸ್ವಚ್ಛತೆಗೆ ಪ್ರಾಮುಖ್ಯತೆ ನೀಡಲಾಗುತ್ತಿದೆ. – **ಶ್ರೀಮತಿ ಉಮಾ, ಮೈಸೂರು**

* * *



ಸುತ್ತೂರು ಜಾತ್ರೆಯ ಸೊಬಗೇ ಬೇರೆ, ಇಲ್ಲಿನ ಸಂಭ್ರಮವೇ ಬೇರೆ. ಸಾಂಸ್ಕೃತಿಕ ಹಾಗೂ ಧಾರ್ಮಿಕ ಸ್ಥಳವಿದು. ಈ ಜಾತ್ರೆಯ ಮುಖಾಂತರ ಹಲವು ವಿಚಾರಗಳನ್ನು ತಿಳಿದುಕೊಳ್ಳಬಹುದು. ಇಲ್ಲಿ ಕಲಿಯಲು ಒಳ್ಳೆಯ ಅವಕಾಶವಿದೆ. ಯಾವುದೇ ಭೇದವಿಲ್ಲದಂತೆ ನಡೆಯುವ ಜಾತ್ರೆ ಇದು. – **ಶ್ರೀ ಆಕಾಶ್, ಮಂಗಳೂರು**

* * *



ಇದೇ ಮೊದಲ ಬಾರಿಗೆ ಜಾತ್ರೆಯನ್ನು ನೋಡಲು ಬಂದಿದ್ದೇನೆ. ಇಲ್ಲಿನ ವ್ಯವಸ್ಥೆ ತುಂಬ ಚೆನ್ನಾಗಿದೆ. ಜಾತ್ರೆ ವೈಭವಯುತವಾಗಿ ನಡೆಯುತ್ತಿದೆ. ಈ ಜಾತ್ರೆಯ ಬಗ್ಗೆ ಹಿಂದೆ ಕೇಳಿದ್ದು ನಿಜಕ್ಕೂ ಇಂದು ನಿಜವೆನಿಸಿದೆ. ಅದರಲ್ಲಿಯೂ ವಸ್ತುಪ್ರದರ್ಶನ ತುಂಬ ಚೆನ್ನಾಗಿದೆ. – **ಶ್ರೀಮತಿ ಕಮಲಾಕ್ಷಿ, ಮೈಸೂರು**

**ಕೆ.ಪಿ.ದೀಪಶ್ರೀ, ಜಿ.ಚಂದನ**

## ಸೋಬಾನೆ ಪದ ಸ್ಪರ್ಧೆ



ಜಾತ್ರಾ ಮಹೋತ್ಸವದ ಅಂಗವಾಗಿ ಸೋಬಾನೆ ಪದ ಸ್ಪರ್ಧೆಯನ್ನು ಅಕ್ಕಮಹಾದೇವಿ ವಸತಿನಿಲಯದಲ್ಲಿ ಆಯೋಜಿಸಲಾಗಿತ್ತು. ಈ ಸ್ಪರ್ಧೆಯಲ್ಲಿ ವಿವಿಧ ಜಿಲ್ಲೆಗಳಿಂದ 55 ತಂಡಗಳು ಭಾಗವಹಿಸಿದ್ದವು. ಜಮಖಂಡಿಯ ಶ್ರೀಮತಿ ನೀಲವ್ವ ಪಳಪ್ಪನರ ಮದರಕಂಡಿಯವರು ಪ್ರಥಮ ಬಹುಮಾನವನ್ನು ಪಡೆದರೆ, ಧಾರವಾಡ ಜಿಲ್ಲೆಯ ಮುತ್ತಗಿ ಕಲಘಟಗಿಯ ಶ್ರೀಮತಿ ಬಸವ್ವ ಹೊಸೂರು ಮತ್ತು ತಂಡದವರು ದ್ವಿತೀಯ ಬಹುಮಾನವನ್ನು ಗಳಿಸಿಕೊಂಡಿದ್ದಾರೆ, ನರಸೀಪುರದ ಶ್ರೀಮತಿ ಶಿವಮ್ಮ ಕುಂತಹಳ್ಳಿ ಮತ್ತು ತಂಡದವರು ತೃತೀಯ ಬಹುಮಾನವನ್ನು ಹಾಗೂ ಧಾರವಾಡದ ಹೊನ್ನಾಪುರ ಗ್ರಾಮದ ಶ್ರೀಮತಿ ನೀಲವ್ವ ಹುದ್ದಾರ ಮತ್ತು ತಂಡದವರು ಸಮಾಧಾನಕರ ಬಹುಮಾನ ಪಡೆದಿರುತ್ತಾರೆ.

ಶ್ರೀಮತಿ ಎಸ್.ರಮಾಮಣಿ, ಶ್ರೀಮತಿ ವರಲಕ್ಷ್ಮಿ, ಶ್ರೀಮತಿ ಸೌಮ್ಯಕುಮಾರಿ, ಶ್ರೀಮತಿ ಭಾಗ್ಯರಥಿ, ಶ್ರೀಮತಿ ಮಮತ ಮತ್ತು ಶ್ರೀಮತಿ ಬಿ.ಸರೋಜ ಇವರುಗಳು ತೀರ್ಪುಗಾರರಾಗಿ ಆಗಮಿಸಿದ್ದರು ಮತ್ತು ಶ್ರೀಮತಿ ನೇತ್ರರವರು ಸಂಚಾಲಕರಾಗಿದ್ದರು. – **ಕೃಷ್ಣಮಾಧುರಿ**

# ಕಣ್ಮನ ತಣಿಸುವ ಭಜನೆ : ಭಕ್ತಿಭಾವದಿ ಭಕ್ತಸಾಗರ

ಜಾತ್ರಾ ಮಹೋತ್ಸವದ ಅಂಗವಾಗಿ ಸುತ್ತೂರು ಶಾಲಾ ಸಭಾಂಗಣದಲ್ಲಿ ಭಜನಾ ಮೇಳವನ್ನು ಆಯೋಜಿಸಲಾಗಿದ್ದು, ಭಜನಾ ಮೇಳದ ಸ್ಪರ್ಧೆಯಲ್ಲಿ ಒಟ್ಟು 700 ಸ್ಪರ್ಧೆಗಳು ಸ್ಪರ್ಧಿಸುತ್ತಿದ್ದು, ಇವರಲ್ಲಿ 483 ಪುರುಷರು, 179 ಮಹಿಳೆಯರು, 26 ಮಕ್ಕಳು ಹಾಗೂ 12 ಹೊರರಾಜ್ಯದ (ಕೇರಳ) ಸ್ಪರ್ಧಿಗಳಾಗಿರುತ್ತಾರೆ.

ವಿಶೇಷ ಆಕರ್ಷಣೀಯ ಕಾರ್ಯಕ್ರಮವಾದ ಭಜನಾ ಮೇಳದಲ್ಲಿ ಭಾಗವಹಿಸುವ ಎಲ್ಲಾ ಸ್ಪರ್ಧಿಗಳು ತಮ್ಮ ಜಿಲ್ಲೆಯ ಸಂಸ್ಕೃತಿಗೆ ಹಾಗೂ ಜೀವನಶೈಲಿಗೆ ತಕ್ಕಂತಹ ಉಡುಪು ಧರಿಸಿ ತಮ್ಮದೇ ಶೈಲಿಯ ಭಜನೆ, ಇತರೆ ಗೀತೆಗಳನ್ನು ಹಾಡುವುದು ವಿಶೇಷ. ಈ ಭಜನಾಮೇಳಕ್ಕೆ ಹಲವಾರು ಜಿಲ್ಲೆಗಳಿಂದ ಸ್ಪರ್ಧೆಗಳು ಆಗಮಿಸಿದ್ದು, ಅವರಲ್ಲಿ ಬೆಳಗಾಂನಿಂದ 133, ಬಾಗಲಕೋಟೆಯಿಂದ 155, ಧಾರವಾಡದಿಂದ 101, ಗದಗದಿಂದ 27, ದಾವಣಗೆರೆಯಿಂದ 20, ವಿಜಯಪುರದಿಂದ 12, ಚಿತ್ರದುರ್ಗದಿಂದ 8, ಹಾವೇರಿಯಿಂದ 8, ಬಳ್ಳಾರಿಯಿಂದ 15, ತುಮಕೂರಿನಿಂದ 5, ಹಾಸನದಿಂದ 5, ಮೈಸೂರಿನಿಂದ 12, ಮಂಡ್ಯದಿಂದ 10, ಚಾಮರಾಜನಗರದಿಂದ 05, ಚಿಕ್ಕಮಗಳೂರಿನಿಂದ ಒಬ್ಬರು ಆಗಮಿಸಿದ್ದಾರೆ.

ಭಜನಾಮೇಳವು ಸಂಸ್ಕೃತಿ ಹಾಗೂ ಕಲೆಯನ್ನು ಆಸ್ವಾದಿಸಲು ಬರುವ ಭಕ್ತಾದಿಗಳಿಗೆ ಕಣ್ಮನ ತಣಿಸಲಿದ್ದು, ಪ್ರತಿಭಾವಂತ ಸ್ಪರ್ಧೆಗಳಿಗೆ ಉತ್ತಮ ವೇದಿಕೆಯಾಗಲಿದೆ.



# ಶರಣರ ಕಾಯಕ ಎಲ್ಲರಿಗೂ ಪ್ರೇರಕ



ಮಂಗಳವಾರ ಮುಂಜಾನೆ ನಂದಿಗುಂದ ಗ್ರಾಮದಲ್ಲಿ ಜರುಗಿದ ಸ್ನೇಹ-ಸೌಹಾರ್ದ-ಶಾಂತಿ ಪ್ರಾರ್ಥನಾ ಪಥಸಂಚಲನದಲ್ಲಿ ನಿ.ಪ್ರ.ಸ್ವ ಶ್ರೀ ಪ್ರಭುಕಿರೀಟ ಸ್ವಾಮಿಗಳು, ಷ.ಬ್ರ.ಶ್ರೀ ಮಹೇಶ್ವರ ಸ್ವಾಮಿಗಳು, ಶ್ರೀ ಚೆನ್ನಮುನೇಶ್ವರ ಶಿವಚಾರ್ಯ ಸ್ವಾಮಿಗಳವರು, ಹರಗುರು ಚರಮೂರ್ತಿಗಳು ಹಾಗೂ ಗ್ರಾಮಸ್ಥರಿದ್ದಾರೆ.

ನಂದಿಗುಂದ ಗ್ರಾಮದಲ್ಲಿ ಮಂಗಳವಾರ ಮುಂಜಾನೆ ಸ್ನೇಹ-ಸೌಹಾರ್ದ-ಶಾಂತಿ ಪ್ರಾರ್ಥನಾ ಪಥಸಂಚಲನ ಕಾರ್ಯಕ್ರಮ ನಡೆಯಿತು. ಊರಿನ ಪ್ರಮುಖ ಬೀದಿಗಳಲ್ಲಿ ವಾದ್ಯ ಮೇಳ, ಬ್ಯಾಂಡ್‌ಸೆಟ್, ಭಜನೆ ಮತ್ತು ಶಾಲಾ ಮಕ್ಕಳ ಪಥ ಸಂಚಲನದೊಂದಿಗೆ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಉತ್ಸವ ಮೂರ್ತಿಗೆ ಭಕ್ತಾದಿಗಳು ಪೂಜೆ ಸಲ್ಲಿಸಿ ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿದರು.

ಕನಕಪುರ ತಾಲ್ಲೂಕು ದೊಡ್ಡ ಮರಳವಾಡಿ ಗ್ರಾಮದ ಶ್ರೀ ಬಸವ ಗುರುಕುಲ ಶಿವಮಠದ ನಿ.ಪ್ರ.ಸ್ವ ಶ್ರೀ ಪ್ರಭುಕಿರೀಟ ಸ್ವಾಮಿಗಳವರು ಷಟಸ್ಥಲ ಧ್ವಜಾರೋಹಣವನ್ನು ನೆರವೇರಿಸಿ ಮಾತನಾಡುತ್ತಾ ಹನ್ನೆರಡನೆ ಶತಮಾನದಲ್ಲಿ "ಕಾಯಕವೇ ಕೈಲಾಸ" ಎಂಬ ತತ್ವವನ್ನು ಸಾರಿದ ಬಸವಣ್ಣನವರ ಸರಳತೆ, ಸಮಾನತೆ, ಜ್ಯಾತ್ಯತೀತ, ದಾಸೋಹ ತತ್ವಗಳ ಮೂಲಕ ಜನರಲ್ಲಿ ಅರಿವನ್ನು ಮೂಡಿಸುವಲ್ಲಿ ಮಠಗಳು ಸಮಾಜಕ್ಕೆ ಪ್ರೇರಕವಾಗಿವೆ. ಸಾಮಾಜಿಕ ಸುಧಾರಣೆಯ ನಿಲುವಿನಲ್ಲಿ ವರ್ಗಾತೀತ, ಧರ್ಮಾತೀತ ತತ್ವಕ್ಕೆ ಬದ್ಧರಾಗಿ ಸಮಾಜವನ್ನು ಬೆಳಗಿದರು ಎಂದು ಶುಭಸಂದೇಶ ನೀಡಿದರು.

ಸಂಗಮ ಶ್ರೀ ರಾಮಲಿಂಗೇಶ್ವರ ಕ್ಷೇತ್ರದ ಶ್ರೀ ಕಾರ್ಯಸ್ವಾಮಿ ಮಠದ ಷ.ಬ್ರ.ಶ್ರೀ ಮಹೇಶ್ವರ ಸ್ವಾಮಿಗಳು ಧರ್ಮಸಂದೇಶ ನೀಡುತ್ತಾ ಮಠ ಮತ್ತು ಭಕ್ತರ ನಡುವೆ ಗುರು-ಶಿಷ್ಯರ ಸಂಬಂಧ ಇರಬೇಕು. ಮಠಗಳು ಶರಣರ ತತ್ವಗಳನ್ನು ಬೋಧಿಸುವ ಮೂಲಕ ಜನರಲ್ಲಿ ವೈಚಾರಿಕ ಚಿಂತನೆಗಳನ್ನು ಮೂಡಿಸುವಂತಾಗಬೇಕು. ಭಕ್ತಾದಿಗಳು ಅಷ್ಟಾವರಣವನ್ನು ಆಚರಿಸುವಲ್ಲಿ ಸಮಾಜಕ್ಕೆ ಮಾದರಿಯಾಗಿರಬೇಕು. ಇಷ್ಟಲಿಂಗ ಪೂಜೆಯಿಂದ ಸಾರ್ಥಕ ಬದುಕನ್ನು ನಡೆಸಬೇಕು. ಕಾಯಕ ನಿಷ್ಠೆಯಿಂದ ಮಾತ್ರ ಆಧುನಿಕ ಜಾಲತಾಣಗಳ ಕಡೆ ಮೋಹಗೊಳ್ಳುವುದು ಕಡಿಮೆಯಾಗುತ್ತದೆ. ಜಾನಪದ ಕಲೆಗಳನ್ನು ಉಳಿಸಿ ಬೆಳೆಸುವ ಹಾಗೂ ಧಾರ್ಮಿಕ ಜಾಗೃತಿಯನ್ನು ಮೂಡಿಸುವ ಈ ಜಾತ್ರೆಯನ್ನು ಶ್ರೀಗಳು ಆಯೋಜಿಸಿರುವುದು ನಮ್ಮ ನಿಮ್ಮೆಲ್ಲರ ಪುಣ್ಯ ಎಂದು ತಿಳಿಸಿದರು.

ಕಲ್ಬುರ್ಗಿ ಜಿಲ್ಲೆಯ ಸೋಗೂರು ಶ್ರೀಮಠದ ಶ್ರೀ ಚೆನ್ನಮುನೇಶ್ವರ ಶಿವಚಾರ್ಯ ಸ್ವಾಮಿಗಳವರು ಧರ್ಮ ಸಂದೇಶ ನೀಡುತ್ತಾ ಮಾನವ ಇಂದು ದುಷ್ಚಟಕ್ಕೆ ಬಲಿಯಾಗಿ ಸುಂದರ ಬದುಕನ್ನು ಕಳೆದುಕೊಳ್ಳುತ್ತಿದ್ದಾನೆ ಎಂಬುದನ್ನು ಉದಾಹರಣೆಯೊಂದಿಗೆ ತಿಳಿಸಿದ ಅವರು "ಗುಟ್ಕಾ ತಿಂದು ಮಟ್ಕಾ ಆಡಿ ಚಟಕ್ ಬಿದ್ ಮಠಕ್ ಬರಲಾರದೆ ಗೊಟಕ್ ಅಂತಾನ" ಎಂದರು. ರೈತ ನಿಷ್ಠೆಯಿಂದ ತನ್ನ ಕಾಯಕವನ್ನು ಗೌರವಿಸುವುದು ಮುಖ್ಯ ಎಂದರು. ಮಾನವ ತನ್ನನ್ನು ತಾನು ಅರಿತು ಇತರರಿಗೆ ತಿಳುವಳಿಕೆ ನೀಡುವುದು ಕೂಡ ಅಷ್ಟೇ ಮುಖ್ಯ. ಮನುಷ್ಯ ಬದಲಾವಣೆ ಯಾದಾಗ ಮಾತ್ರ ಜಗತ್ತು ಬದಲಾವಣೆಯಾಗುತ್ತದೆ ಎಂದು ಹೇಳಿದರು. **- ಆತಿಷಾ ಲೋಕ್ ಮತ್ತು ವಿನೋದ್** ಸಿ

## ದೇಸಿ ಆಟಗಳ ಸ್ಪರ್ಧೆ

ಜಾತ್ರಾ ಮಹೋತ್ಸದ ಅಂಗವಾಗಿ ದಿನಾಂಕ 23 ರಿಂದ 25ರವರಗೆ ಜೆಎಸ್‌ಎಸ್ ಶಾಲಾ ಆವರಣದಲ್ಲಿ ದೇಸಿ ಆಟಗಳ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಪ್ರಾಥಮಿಕ ಶಾಲಾ ವಿಭಾಗದಲ್ಲಿ 'ಬಾಲಕರಿಗೆ' ಗೋಲಿ, ಬುಗರಿ, ಚೌಕಬಾರ, ಹಾವುಏಣಿ ಆಟಗಳನ್ನು ಹಾಗೂ 'ಬಾಲಕಿಯರಿಗೆ' ಕುಂಟಾಬಿಲ್ಲೆ, ಅಳಿಗುಳಿಮನೆ, ಚೌಕಬಾರ,



ಹಾವುಏಣಿ ಆಟಗಳನ್ನು ಏರ್ಪಡಿಸಲಾಗಿದೆ. ಪ್ರೌಢಶಾಲಾ ವಿಭಾಗದಲ್ಲಿ 'ಬಾಲಕರಿಗೆ' ಗೋಲಿ, ಬುಗರಿ, ನವಕಂಕರಿ, ಹುಲಿಕುರಿ, ಚೌಕಬಾರ, ಹಾವುಏಣಿ, ಚದುರಂಗ, ಕೆಸರುಗದ್ದೆ ಓಟದ ಸ್ಪರ್ಧೆ, 'ಬಾಲಕಿಯರಿಗೆ' ಅಣ್ಣೆಕಲ್ಲು, ಕುಂಟಾಬಿಲ್ಲೆ, ಅಳಿಗುಳಿಮನೆ, ನವಕಂಕರಿ, ಹುಲಿಕುರಿ, ಚೌಕಬಾರ, ಹಾವುಏಣಿ, ಚದುರಂಗ ಸ್ಪರ್ಧೆಗಳನ್ನು ಏರ್ಪಡಿಸಿಲಾಗಿದೆ ಮತ್ತು ಒಂದು ತಂಡದಲ್ಲಿ 8 ವಿದ್ಯಾರ್ಥಿಗಳಂತೆ ಬಾಲಕರ 26 ತಂಡಗಳಿಗೆ ಹಾಗೂ ಬಾಲಕಿಯರ 20 ತಂಡಗಳಿಗೆ ಮೈದಾನದಲ್ಲಿ ಹಗ್ಗಜಗ್ಗಾಟ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

ಗ್ರಾಮೀಣ ಜನತೆಗಾಗಿ ದಿನಾಂಕ 23ರಂದು ಬೆಳಿಗ್ಗೆ 7 ರಿಂದ 11.00 ಘಂಟೆಯವರಿಗೆ ದೇಸಿ ಆಟಗಳನ್ನು ಏರ್ಪಡಿಸಿದ್ದು, 'ಪುರಷರಿಗೆ' ಕೆಸರುಗದ್ದೆ ಓಟ, ಕೆಸರುಗದ್ದೆಯಲ್ಲಿ ಹಗ್ಗಜಗ್ಗಾಟ, 50 ಕೆ.ಜಿ. ತೂಕದ ಚೀಲ ಹೊತ್ತು ಓಡುವುದು, ಕಲ್ಲುಗುಂಡು ಎತ್ತುವುದು, ಬುಗುರಿ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ದಿನಾಂಕ 24ರಂದು 'ಮಹಿಳೆಯರಿಗೆ' ನಿಂಬೆಹಣ್ಣು ಇರುವ ಚಮಚವನ್ನು ಬಾಯಲ್ಲಿಟ್ಟುಕೊಂಡು ಓಡುವುದು, ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಮಡಿಕೆ ಒಡೆಯುವುದು, ಮೈದಾನದಲ್ಲಿ ಹಗ್ಗಜಗ್ಗಾಟ, ಅಳಿಗುಳಿಮನೆ, ಅಣ್ಣೆಕಲ್ಲು, ತುಂಬಿದ ಬಿಂದಿಗೆಯನ್ನು ತಲೆಯ ಮೇಲೆ ಹೊತ್ತು ಓಡುವ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಸ್ಪರ್ಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕ್ರೀಡಾಕೂಟವನ್ನು ಪ್ರೋತ್ಸಾಹಿಸಬೇಕಾಗಿದೆ.



ಜಾತ್ರಾ ಮಹೋತ್ಸವದಲ್ಲಿ ದಾಸೋಹಕ್ಕೆ ಸಿದ್ಧಗೊಂಡಿರುವ ಬೂಂದಿ

# ವಸ್ತುಪ್ರದರ್ಶನ

# 650ಕ್ಕೂ ಹೆಚ್ಚು ವೈವಿಧ್ಯ ಮಳಿಗೆಗಳ ಅನಾವರಣ

ಜಾತ್ರಾ ಮಹೋತ್ಸವದ ಅಂಗವಾಗಿ ಕೃಷಿ ಮೇಳದ 150, ವಸ್ತುಪ್ರದರ್ಶನದ 250 ಹಾಗೂ 250 ಕ್ಕೂ ಹೆಚ್ಚು ವಾಣಿಜ್ಯ ಮಳಿಗೆಗಳು ಜಾತ್ರಾ ಮಹೋತ್ಸವದ ಆವರಣವನ್ನು ಕಳೆಗಟ್ಟಿಸಿವೆ.

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಕೈಮಗ್ಗ ಮತ್ತು ಜವಳಿ ಇಲಾಖೆಗಳ ಉತ್ಪಾದಕರು, ವಾಣಿಜ್ಯೋದ್ಯಮಿಗಳು, ಗೃಹಬಳಕೆ ವಸ್ತುಗಳ ಉತ್ಪಾದಕರು ಹಾಗೂ ಮಾರಾಟಗಾರರು, ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಅಭಿವೃದ್ಧಿ ಇಲಾಖೆಗಳು, ಜೆಎಸ್‌ಎಸ್ ಮಹಾವಿದ್ಯಾಪೀಠದ ಅಂಗ ಸಂಸ್ಥೆಗಳು, ಇತರ ಸಂಘ ಸಂಸ್ಥೆಗಳು, ಕೈಗಾರಿ ಕೋದ್ಯಮಿಗಳು, ಕರಕುಶಲ ಕರ್ಮಿಗಳು ಹಾಗೂ ಸ್ತ್ರೀಶಕ್ತಿ ಸ್ವ–ಸಹಾಯ ಸಂಘಗಳು ತಯಾರಿಸಿದ, ತಮ್ಮ ಸಾಧನೆಯ ಹಾದಿ ಯನ್ನು ತೆರೆದಿಡುತ್ತಿರುವ ಪರಿಯನ್ನು ಹೇಳುವುದಕ್ಕಿಂತ ನೀವೂ ಒಮ್ಮೆ ಜೆಎಸ್‌ಎಸ್ ಶಾಲಾ ಆವರಣದಲ್ಲಿ ಹದಿನೈದು ಎಕರೆ ವಿಸ್ತೀರ್ಣದಲ್ಲಿ ರೂಪುಗೊಂಡಿರುವ ವಸ್ತು ಪ್ರದರ್ಶನವನ್ನು ಕಣ್ಣಾರೆ ನೋಡಲೇಬೇಕು.

**ವಿಶೇಷತೆಗಳು:** ದಿನಬಳಕೆ ಗೃಹ ಉಪಯೋಗಿ ವಸ್ತುಗಳು, ಯಂತ್ರಗಳು, ಮಣ್ಣು ಹಾಗೂ ಮರದಿಂದ ಮಾಡಿದ ವಸ್ತುಗಳು, ಕೈಮಗ್ಗದಲ್ಲಿ ಹತ್ತಿಯಿಂದ ತಯಾರಿಸಿದ ಬಟ್ಟೆ, ಸೀರೆ, ಪಂಚೆ, ಟವಲ್, ರೇಷ್ಮೆ ಬಟ್ಟೆಗಳ ಪ್ರದರ್ಶನ ಹಾಗೂ ಮಾರಾಟವಿದೆ. ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಸಂಸ್ಥೆಗಳಾದ ಜೆಎಸ್‌ಎಸ್ ವಿಜ್ಞಾನ ಮತ್ತು ತಾಂತ್ರಿಕ ವಿಶ್ವವಿದ್ಯಾಲಯ, ವಿಕಲ ಚೇತನರ ಪಾಲಿಟೆಕ್ನಿಕ್, ಮಹಿಳಾ ಪಾಲಿಟೆಕ್ನಿಕ್‌ಗಳ ವತಿಯಿಂದ ತಾಂತ್ರಿಕ ವಸ್ತುಪ್ರದರ್ಶನ ಏರ್ಪಡಿಸಿದ್ದು, ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯ/ ಎಸ್‌ಜೆಸಿಇ ವತಿಯಿಂದ ವಾಟ್ಸಪ್ ಭದ್ರತೆ, ಸ್ಮಾರ್ಟ್ ಟೆರೆಸ್ ಗಾರ್ಡನಿಂಗ್, ಸ್ಮಾರ್ಟ್ ನಗರಗಳಿಗೆ ವಿದ್ಯುತ್ ನಿಯಂತ್ರಣ ವ್ಯವಸ್ಥೆ, ಸೌರ ಆಧಾರಿತ ಸ್ಮಾರ್ಟ್ ಕಸದ ಡಬ್ಬ, ಹೇರ್ ಪಿನ್ ವೃತ್ತಗಳಲ್ಲಿ ಸುಧಾರಿತ ವಾಹನ ಪತ್ತೆ ಹಾಗೂ ಘರ್ಷಣೆ ತಪ್ಪಿಸುವ ವಿಧಾನ ರಿಮೋಟ್ ಹೆಲ್ತ್‌ಕೇರ್, ಸೈಬರ್ ಕ್ರೈಂ ಬಗ್ಗೆ ಅರಿವು ಮೂಡಿಸುವುದು. ಬೆರಳಚ್ಚು ಆಧಾರಿತ ಚುನಾವಣೆ, ಕಳೆದು ಹೋದ ವಸ್ತುಗಳ ಪತ್ತೆ ಹಚ್ಚುವಿಕೆ ವಿಧಾನ, ಸ್ವಯಂಚಾಲಿತ ಗೋಡೆ ಬಣ್ಣ ಹಚ್ಚುವಿಕೆ, ಕನ್ನಡ ಪದ್ಯದ ಉದ್ದೇಶಿತ ಮೇಟ್ರಿಕ್ ವಿಶ್ಲೇಷಕ, ಪೆಡಲ್ ಮೂಲಕ ನೀರು ಶುದ್ಧೀಕರಣ ಘಟಕ, ಪೋರ್ಟಬಲ್ 3ಡಿ ಮುದ್ರಕದ ವಿನ್ಯಾಸ ಮತ್ತು ಅಭಿವೃದ್ಧಿ ಯಂತ್ರ ಹಾಗೂ ಗೋ ಕಾರ್ಟ್ ರೇಸಿಂಗ್ ಕಾರ್ ಇತ್ಯಾದಿ ಮಾದರಿಗಳ ಅರಿವು ಆಧಾರಿತ ಪ್ರದರ್ಶನವಿರುತ್ತದೆ.

ಜೆಎಸ್‌ಎಸ್ ಪಾಲಿಟೆಕ್ನಿಕ್ ವಿದ್ಯಾರ್ಥಿಗಳು ತಯಾರಿಸಿದ ತಂತ್ರಾಂಶ, ಆಧುನಿಕ ತಂತ್ರಜ್ಞಾನವನ್ನೊಳಗೊಂಡ ಮಾದರಿಗಳು, ಪಾರಂಪರಿಕ/ಆಧುನಿಕ ಚಿನ್ನಾಭರಣಗಳ ಬಳಕೆ, ಆಭರಣ ವಿನ್ಯಾಸ ಮತ್ತು ತಂತ್ರಜ್ಞಾನ ವಿಭಾಗದಲ್ಲಿ ತಯಾರಿಸಲ್ಪಟ್ಟ ಮಾದರಿ ಆಭರಣಗಳ ಪ್ರದರ್ಶನ ಮತ್ತು ಮಾರಾಟ ಹಾಗೂ ಸಂಸ್ಥೆಯಲ್ಲಿ ವಿಶೇಷಚೇತನ ಮಕ್ಕಳು ತಾಂತ್ರಿಕ ಶಿಕ್ಷಣವನ್ನು ಪಡೆಯುವುದರ ಬಗ್ಗೆ ಅರಿವು/ಜಾಗೃತಿಯುನ್ನು ಮೂಡಿಸಲಾಗುತ್ತಿದೆ.

ಜೆಎಸ್‌ಎಸ್ ಮಹಾವಿದ್ಯಾಪೀಠದ ಸಾಮಾನ್ಯ ಶಿಕ್ಷಣ ವಿಭಾಗವು ಸುಮಾರು 200ಕ್ಕೂ ಹೆಚ್ಚು ಮಾದರಿಗಳ ಶೈಕ್ಷಣಿಕ ವಸ್ತುಪ್ರದರ್ಶನವು ಪ್ರಾಥಮಿಕ ಹಾಗೂ ಪ್ರೌಢಶಾಲಾ ಹಂತದ ವಿದ್ಯಾರ್ಥಿಗಳ ಮನೋ ವಿಕಾಸಕ್ಕೆ ಹಾಗೂ ಶೈಕ್ಷಣಿಕ ಉನ್ನತಿಗೆ ಪೂರಕವಾಗಿದೆ. ಜೆಎಸ್‌ಎಸ್ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಘಟಕಗಳಾದ ಆಸ್ಪತ್ರೆ, ವೈದ್ಯಕೀಯ, ಆಯುರ್ವೇದ, ಔಷದ ವಿಜ್ಞಾನ, ದಂತ ವೈದ್ಯಕೀಯ, ನರ್ಸಿಂಗ್ ಶಿಕ್ಷಣ, ಫಿಜಿಯೋಥೆರಪಿ, ವಾಕ್ ಮತ್ತು ಶ್ರವಣ ಹಾಗೂ ಪ್ರಕೃತಿ ಮತ್ತು ಯೋಗ ವಿಜ್ಞಾನ ಮಹಾವಿದ್ಯಾಲಯಗಳ ಸಂಯುಕ್ತಾಶ್ರಯದಲ್ಲಿ ಪ್ರದರ್ಶನಗೊಂಡಿರುವ ವೈದ್ಯಕೀಯ ವಸ್ತುಪ್ರದರ್ಶನವು ವೈದ್ಯಕೀಯ ಮಹಾವಿದ್ಯಾಲಯದ ವತಿಯಿಂದ ದೇಹದ ವಿವಿಧ ಅಂಗಗಳ ರಚನೆ ಮತ್ತು ಕ್ರಿಯೆ, 30 ವರ್ಷ ಮೇಲ್ಪಟ್ಟವರಿಗೆ ಕೊಬ್ಬಿನಂಶ, HbA1C– ಮಧುಮೇಹಿಗಳಲ್ಲಿ ಸಕ್ಕರೆ ಪ್ರಮಾಣದ ನಿಯಂತ್ರಣ ಪರೀಕ್ಷೆ ಮಾಡಲಾಗುತ್ತಿದೆ. ಸ್ವಯಂ ಔಷಧಿ ತೆಗೆದುಕೊಳ್ಳವುದು, ಔಷಧಿಗಳ ಅಡ್ಡ ಪರಿಣಾಮ ಮತ್ತು ವೈದ್ಯರ ಸಲಹೆಗಳನ್ನು ದಾಖಲಿಸುವ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಕ್ಷಯರೋಗ ಪತ್ತೆ ಮತ್ತು ಹೆಚ್‌ಐವಿ ಸೋಂಕನ್ನು ಪರೀಕ್ಷಿಸಲಾಗುತ್ತಿದೆ. ಜೆಎಸ್‌ಎಸ್ ಆಸ್ಪತ್ರೆ ವತಿಯಿಂದ ಸಮಗ್ರ ಆರೋಗ್ಯ ತಪಾಸಣೆ, ವಿವಿಧ ವಿಭಾಗಗಳಲ್ಲಿ ದೊರೆಯುವ ಸೌಲಭ್ಯಗಳು, ಸರ್ಕಾರಿ ಹಾಗೂ ಖಾಸಗಿ ಆರೋಗ್ಯ ವಿಮಾ ಯೋಜನೆಗಳು, ರಕ್ತದಾನ, ದೇಹದಾನ ಮತ್ತು ನೇತ್ರದಾನದ ಬಗ್ಗೆ ಅರಿವು ಮತ್ತು ಜಾಗೃತಿ ಮೂಡಿಸಲಾಗುತ್ತಿದೆ. ಕ್ಯಾನ್ಸರ್ ಬಗ್ಗೆ ಅರಿವು ಮತ್ತು ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಜನರಲ್ಲಿ ತಿಳುವಳಿಕೆ ನೀಡಲು ಕಿದ್ವಾಯಿ ಗಂಥಿ ಸಂಸ್ಥೆಯ ಸಹಯೋಗದೊಂದಿಗೆ ಸಂಚಾರಿ ವಾಹನದ ಮೂಲಕ ಅರಿವು ಮೂಡಿಸಲಾಗುತ್ತಿದೆ.

ಜೆಎಸ್‌ಎಸ್ ನರ್ಸಿಂಗ್ ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳ ವತಿಯಿಂದ ಬೊಜ್ಜು, ರಕ್ತದೊತ್ತಡ, ಮಧುಮೇಹ ರೋಗಿಗಳಿಗೆ ಆಹಾರ, ವ್ಯಾಯಾಮ ಪಿರಮಿಡ್ ಬಳಸಿ ಜೀವನ ಶೈಲಿ ಬದಲಿಸಿಕೊಳ್ಳುವ ಬಗ್ಗೆ ಅರಿವು ಮೂಡಿಸುವುದು, ಸೊಳ್ಳೆಗಳಿಂದ ಹರಡುವ ರೋಗಗಳ ಲಕ್ಷಣಗಳು, ಅವುಗಳ ನಿಯಂತ್ರಣ ಮತ್ತು ತಡೆಗಟ್ಟುವ ಬಗ್ಗೆ ಮತ್ತು ಆಹಾರ ಕಲಬೆರಕೆ ಪತ್ತೆಹಚ್ಚುವ ವಿಧಾನಗಳನ್ನು ಪ್ರಾತ್ಯಕ್ಷಿಕೆಗಳ ಮೂಲಕ ಮಾಹಿತಿ ನೀಡಲಾಗುತ್ತಿದೆ. ರಾಷ್ಟ್ರೀಯ ಕುಟುಂಬ ಕಲ್ಯಾಣ ಕಾರ್ಯಕ್ರಮಗಳು ಮತ್ತು ಗರ್ಭ ನಿರೋಧಕ ಸಾಧನಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.

ಪುಟ 7ಕ್ಕೆ




**ಕೃಷಿ ಮೇಳ ಉದ್ಘಾಟನೆ:** ಪರಮಪೂಜ್ಯ ಜಗದ್ಗುರುಗಳು, ಡಾ. ಶ್ರೀ ಶಿವಾನಂದ ಸ್ವಾಮಿಗಳು, ಶ್ರೀ ಜೆ.ಸಿ. ಮಾಧುಸ್ವಾಮಿ, ಡಾ. ಎಂ. ವೀರಪ್ಪ ಮೊಯ್ಲಿ, ಶ್ರೀ ಬಿ.ಜೆ. ಪುಟ್ಟಸ್ವಾಮಿ, ಶ್ರೀ ವಾಸು, ಡಾ. ಮಹದೇವಪ್ಪ ಮೊದಲಾದವರಿದ್ದಾರೆ.




ಮಳಿಗೆ ಉದ್ಘಾಟಿಸುತ್ತಿರುವ ಶ್ರೀ ಎಸ್. ಸಿದ್ದೇಗೌಡರವರು ಹಾಗೂ ಮತ್ತಿತರರು



ತೂಕ ಮತ್ತು ಅಳತೆ ಮಾಪನ ಮಳಿಗೆ ಉದ್ಘಾಟಿಸುತ್ತಿರುವ ಅಧಿಕಾರಿಗಳು

## ಸಾಂಸ್ಕೃತಿಕ ಕಾರ್ಯಕ್ರಮಗಳು

### 22 ಜನವರಿ 2020 ಬುಧವಾರ

ಗದ್ದುಗೆ ಆವರಣದಲ್ಲಿ ಬೆಳಗ್ಗೆ 8.00ಕ್ಕೆ ನಾದಸ್ವರ, 9.00ಕ್ಕೆ ನಂಜನಗೂಡಿನ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ (ರಿ) ಇವರ ವತಿಯಿಂದ ಯೋಗ ಪ್ರಾತ್ಯಕ್ಷಿಕೆ ಕಾರ್ಯಕ್ರಮವಿರುತ್ತದೆ. 10.30ಕ್ಕೆ ಬೀರೂರು ಮಲ್ಲಿಗೆ ಬಳಗದವರಿಂದ ವಚನ ಗಾಯನ, ಮಧ್ಯಾಹ್ನ 12.00ಕ್ಕೆ ಮೈಸೂರಿನ ಶ್ರೀಮತಿ ದಾಕ್ಷಾಯಿಣಿ ಉಮೇಶ ಮತ್ತು ವೃಂದದವರಿಂದ ಭಕ್ತಿಗೀತೆ ಮತ್ತು ಜನಪದ ಗೀತೆ, 1.00ಕ್ಕೆ ನಂಜನಗೂಡಿನ ಶ್ರೀಮತಿ ಎಸ್. ರೇಖಾ ಭಟ್‌ರವರಿಂದ ಸುಗಮ ಸಂಗೀತ, 2.00ಕ್ಕೆ ಚಾಮರಾಜನಗರ ದೊಡ್ಡಮೋಳೆಯ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಶ್ರೀ ದೊಡ್ಡಗವಿ ಬಸಪ್ಪನವರಿಂದ ಜನಪದ ಗೀತೆ ಗಾಯನ, ಸಂಜೆ 6.30ಕ್ಕೆ ಮೈಸೂರಿನ ಅಂತರಾಷ್ಟ್ರೀಯ ಯೋಗ ಪಟು ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಕು. ಹೆಚ್. ಖುಷಿರವರಿಂದ ಯೋಗ ನೃತ್ಯ, ರಾತ್ರಿ 7.30ಕ್ಕೆ ಚಾಮರಾಜನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನವರಿಂದ ಮಂಟೇಸ್ವಾಮಿ ಕಥಾಪ್ರಸಂಗ ಎಂಬ ನಾಟಕ ಪ್ರದರ್ಶನವಿರುತ್ತದೆ ಹಾಗೂ ರಾತ್ರಿ 9.00ಕ್ಕೆ ಮೈಸೂರಿನ ಕು. ನಯನಾ ನಾಗರಾಜ್‌ರವರಿಂದ ಸುಗಮ ಸಂಗೀತ ಗಾಯನವಿದೆ.

# ಜಾತ್ರೆ ಭಕ್ತರ ಉತ್ಸಾಹ ವೃದ್ಧಿಸುವ ಯಾತ್ರೆ

ವಿವಿಧ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭದ ಸಮ್ಮುಖವಹಿಸಿದ್ದ ಹೊನ್ನಾಳಿ ಶ್ರೀ ಹಿರೇಕಲ್ಮಠದ ಷ.ಬ್ರ.ಡಾ. ಶ್ರೀ ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳವರು ಶುಭಸಂದೇಶವನ್ನು ನೀಡುತ್ತಾ ಶ್ರೀಕ್ಷೇತ್ರದ ಜಾತ್ರೆಯು ಕೇವಲ ರಥವನ್ನು ಎಳೆಯುವ ಜಾತ್ರೆಯಲ್ಲ, ಇದು ಭಕ್ತರ ಉತ್ಸಾಹವನ್ನು ವೃದ್ಧಿಸುವ ಯಾತ್ರೆಯಾಗಿದೆ. ಜಾತ್ರೆಯಲ್ಲಿ ದೇವರನ್ನು ಆರಾಧಿಸುವುದಲ್ಲದೇ ಶೈಕ್ಷಣಿಕ, ವೈದ್ಯಕೀಯ ಕೃಷಿ ಕ್ಷೇತ್ರದ ಅಭಿವೃದ್ಧಿಗಾಗಿ ಸುತ್ತೂರು ಶ್ರೀಗಳು ಕಾರಣೀಭೂತರಾಗಿದ್ದಾರೆ. ಶ್ರೀಕ್ಷೇತ್ರದಲ್ಲಿ ನಡೆಯುವ ಜಾತ್ರೆಯು ವೈಜ್ಞಾನಿಕದ ಸಂಕೇತವಾಗಿದ್ದು, ಇಂದಿನ ಕಾರ್ಯಕ್ರಮದಲ್ಲಿ ಅನೇಕ ರೀತಿಯ ವಿಚಾರಗಳನ್ನೊಳಗೊಂಡಿದೆ. ಈ ಜಾತ್ರೆಯು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ವೈಚಾರಿಕ ಮೌಲ್ಯಗಳನ್ನು ಅಳವಡಿಸಿಕೊಂಡಿದೆ.

ಜಾತ್ರೆಯಲ್ಲಿ ಏರ್ಪಡಿಸಲಾಗಿರುವ ದೇಸಿಯ ಆಟಗಳು ಗ್ರಾಮೀಣ ಜನತೆಯ ಮನರಂಜನೆಯ ಜೊತೆಗೆ ಮನೋವಿಕಾಸಕ್ಕೆ ಸಾಕ್ಷಿಯಾಗಿದೆ. ಶ್ರೀಗಳವರು ಅನೇಕ ರೀತಿಯ ಕಾರ್ಯಕ್ರಮಗಳನ್ನು ಶ್ರೀಕ್ಷೇತ್ರದಲ್ಲಿ ಹಮ್ಮಿಕೊಂಡು ಗ್ರಾಮೀಣ ಜನತೆಯ ಬದುಕಿಗೆ ದಾರಿದೀಪವಾಗಿದ್ದಾರೆ ಎಂದು ಹೇಳಿದರು. –ಆದರ್ಶ್



ಜಾತ್ರಾ ಮಹೋತ್ಸವದ ಪೂರ್ವ ಸಿದ್ಧತಾ ಸಮಾಲೋಚನೆಯಲ್ಲಿ: ಜಗದ್ಗುರುಗಳವರೊಂದಿಗೆ ಮೈಸೂರು ಜಿಲ್ಲಾ ಆರಕ್ಷಕ ಅಧೀಕ್ಷಕರಾದ ಶ್ರೀ ಸಿ.ಬಿ. ರಿಷ್ಯಂತ್, ಜಿಲ್ಲಾಧಿಕಾರಿಗಳಾದ ಶ್ರೀ ಅಭಿರಾಮ್ ಜಿ. ಶಂಕರ್, ಕಾರ್ಯದರ್ಶಿಗಳಾದ ಶ್ರೀ ಎಸ್.ಪಿ. ಮಂಜುನಾಥ್ ಹಾಗೂ ಡಿವೈಎಸ್‌ಪಿ ಶ್ರೀ ಪ್ರಭಾಕರ್ ರಾವ್ ಸಿಂಧೆ ಅವರುಗಳಿದ್ದಾರೆ.

# 650ಕ್ಕೂ ಹೆಚ್ಚು ವೈವಿಧ್ಯ ಮಳಿಗೆಗಳ ಅನಾವರಣ

6ನೇ ಪುಟದಿಂದ

ಫಿಜಿಯೋಥೆರಪಿ ಮಹಾವಿದ್ಯಾಲಯದ ವತಿಯಿಂದ ವಯಸ್ಕರು ಮತ್ತು ಹಿರಿಯರಲ್ಲಿ ಕಂಡುಬರುವ ಸಾಮಾನ್ಯ ತೊಂದರೆಗಳಾದ ನರ, ಸ್ನಾಯು ಮತ್ತು ಮೂಳೆಗಳಲ್ಲಿನ ಅಸ್ವಸ್ಥತೆಗಳ ಬಗ್ಗೆ ಅರಿವು ಮೂಡಿಸುವುದರ ಜೊತೆಗೆ ದೈಹಿಕ ಪರೀಕ್ಷೆಯನ್ನು ಮಾಡಲಾಗುತ್ತಿದೆ.

ಕೊಯಮತ್ತೂರಿನ ಜೆಎಸ್‌ಎಸ್ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನ ಸಂಸ್ಥೆಯ ವತಿಯಿಂದ ಯೋಗ ಮತ್ತು ಪ್ರಕೃತಿ ಚಿಕಿತ್ಸೆಯ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗುತ್ತಿದೆ. ಮೈಸೂರಿನ ಜೆಎಸ್‌ಎಸ್ ವಾಕ್ ಶ್ರವಣ ಸಂಸ್ಥೆಯ ವತಿಯಿಂದ ಮಕ್ಕಳಲ್ಲಿ ಮಾತು ಮತ್ತು ಭಾಷೆಯ ಬೆಳವಣಿಗೆ, ವಯಸ್ಸಿಗೆ ಅನುಗುಣವಾಗಿ ಮಾತನಾಡದಿರುವುದು, ಕಲಿಕೆಯತೊಂದರೆ, ಮಾತನಾಡಲು ಮತ್ತು ಕೇಳಿಸಿಕೊಳ್ಳಲು ಉಪಯೋಗಿಸುವ ಉಪಕರಣಗಳ ಪರಿಚಯ, ಅವುಗಳು ಕಾರ್ಯನಿರ್ವಹಿಸುವ ರೀತಿ ಮತ್ತು ತೊಂದರೆಗಳ ಬಗ್ಗೆ ಹಾಗೂ ಸರ್ಕಾರದ ಯೋಜನೆಗಳ ಬಗ್ಗೆ ಪ್ರಚುರಪಡಿಸಲಾಗುತ್ತಿದೆ.

ರಾಜ್ಯ ಸರ್ಕಾರದ ಇಲಾಖೆಗಳಾದ ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ವಾರ್ತಾ ಮತ್ತು ಪ್ರಚಾರ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳಿಂದ ಕೈಗೊಂಡಿರುವ ವಿವಿಧ ಜನಪರ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿ ಸಾರ್ವಜನಿಕರಿಗೆ ಪ್ರಚಾರ ಪಡಿಸಿವೆ ಹಾಗೂ ರಾಜ್ಯ ಮದ್ಯಪಾನ ಸಂಯಮ ಮಂಡಳಿಯವರಿಂದ ಮದ್ಯಪಾನದಿಂದಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಲು ಮುಂದಾಗಿವೆ.

ಕೇಂದ್ರ ಸರ್ಕಾರದ ಇಲಾಖೆಗಳಾದ ಭಾರತೀಯ ಸಂಚಾರ ನಿಗಮ ಲಿ., ಫ್ಯಾಮಿಲಿ ಪ್ಲ್ಯಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ, ಕೇಂದ್ರ ಸರ್ಕಾರದ ಕೇಂದ್ರಿಯ ಪ್ಲಾಸ್ಟಿಕ್ ತಂತ್ರಜ್ಞಾನ ಸಂಸ್ಥೆಯವರು ಕೌಶಲ್ಯ ಅಭಿವೃದ್ಧಿ ಯೋಜನೆಯಡಿ ಹಮ್ಮಿಕೊಳ್ಳುವ ವಿವಿಧ ವೃತ್ತಿಪರ ತರಬೇತಿ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡುತ್ತಿದ್ದಾರೆ. ಭಾರತೀಯ ಅಂಚೆ ಇಲಾಖೆಯವರು ಗ್ರಾಮೀಣ ಜನರಿಗೆ ಅಂಚೆ ಇಲಾಖೆಯಲ್ಲಿರುವ ವಿವಿಧ ಯೋಜನೆಗಳು, ಅಂಚೆ ಚೀಟಿಗಳ ಸಂಗ್ರಹ ಮತ್ತು ಮಾರಾಟ ಹಾಗೂ ಎಲ್ಲಾ ಅಂಚೆ ಉತ್ಪನ್ನಗಳ ಮಾಹಿತಿ ನೀಡುತ್ತಿದ್ದಾರೆ. ವಾರ್ತಾ ಮತ್ತು ಪ್ರಸಾರ ಸಚಿವಾಲಯದವರು ಕೇಂದ್ರ ಸರ್ಕಾರ ರೂಪಿಸಿರುವ ಜನೋಪಯೋಗಿ ಯೋಜನೆಗಳ ಬಗ್ಗೆ ಮಾಹಿತಿಯನ್ನು ಕರಪತ್ರ, ಕಿರುಚಿತ್ರ ಇತರೆ ಪ್ರಚಾರ ಸಾಮಗ್ರಿಗಳ ಮೂಲಕ ಮಾಹಿತಿ ನೀಡುತ್ತಿದ್ದಾರೆ.

ಜೆಎಸ್‌ಎಸ್ ಗ್ರಂಥಮಾಲೆ, ರಾಮಕೃಷ್ಣ ಆಶ್ರಮ, ವಿವೇಕ ಜಾಗೃತಿ ಬಳಗ, ಗುರು ಬಸವಣ್ಣ ಯೋಗ ಕಮ್ಮಟ ಇವರುಗಳ ಆಧ್ಯಾತ್ಮಿಕ ಮತ್ತು ಧಾರ್ಮಿಕ ಗ್ರಂಥಗಳು, ರಾಮಕೃಷ್ಣ–ವಿವೇಕಾನಂದರ ವೇದಾಂತ ಸಾಹಿತ್ಯ, ಶರಣರ ವಚನ ಗ್ರಂಥ, ಲಿಂಗಾಯತ ತತ್ವ ಚಿಂತನೆಗಳ ಪುಸ್ತಕಗಳ ಮಾರಾಟ ಮತ್ತು ಪ್ರದರ್ಶನವನ್ನು ಆಯೋಜಿಸಿದ್ದಾರೆ.

ವಸ್ತುಪ್ರದರ್ಶನದ ಆವರಣದಲ್ಲಿ ದೇಶದ ವಿವಿಧ ರಾಜ್ಯಗಳಿಂದ ಸುಮಾರು 100ಕ್ಕೂ ಹೆಚ್ಚು ಜನ ಕಲಾವಿದರು ತಮ್ಮ ಕಲಾಕೃತಿಗಳನ್ನು ಚಿತ್ರಸಂತೆಯಲ್ಲಿ ಪ್ರದರ್ಶಿಸಿ ಮಾರಾಟ ಮಾಡುತ್ತಿದ್ದಾರೆ ಹಾಗೂ ಸ್ಥಳದಲ್ಲೇ ಚಿತ್ರಗಳನ್ನು ಬರೆದು ಕೊಡುತ್ತಿದ್ದಾರೆ.

ವಸ್ತುಪ್ರದರ್ಶನದ ಆವರಣದಲ್ಲಿ ವಿವಿಧ ಬಗೆಯ, ವಿಭಿನ್ನ ಶೈಲಿಯ ಹಾಗೂ ಪ್ರಾದೇಶಿಕಾವಾರು ತಿಂಡಿ–ತಿನಿಸುಗಳ ಮಾರಾಟ ಮೇಳವನ್ನು ಏರ್ಪಡಿಸಲಾಗಿದೆ. ಇತರ ಸಂಘ ಸಂಸ್ಥೆಗಳೂ ಭಾಗವಹಿಸಿ ತಮ್ಮ ಸೇವೆ ಮತ್ತು ಉತ್ಪನ್ನಗಳ ಬಗ್ಗೆ ವಸ್ತುಪ್ರದರ್ಶನಕ್ಕೆ ಭೇಟಿ ನೀಡುವ ಗ್ರಾಹಕರಿಗೆ ಪ್ರಚಾರಪಡಿಸುವುದರೊಂದಿಗೆ ಲಾಭದಾಯಕ ವಹಿವಾಟನ್ನು ನಡೆಸುತ್ತಿದ್ದಾರೆ.

ಜೆಎಸ್‌ಎಸ್ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳಿಂದ ವಸ್ತುಪ್ರದರ್ಶನದ ಆವರಣದಲ್ಲಿ ಸಾಂಸ್ಕೃತಿಕ ವೇದಿಕೆಯನ್ನು ನಿರ್ಮಿಸಿದ್ದು, ಇಲ್ಲಿ ಪ್ರತಿದಿನ ಬೆಳಗ್ಗೆ 10 ರಿಂದ ರಾತ್ರಿ 10ರವರೆಗೆ ನೃತ್ಯ, ಸಂಗೀತ ಹಾಗೂ ಸಾಮಾಜಿಕ ನಾಟಕಗಳು ಪ್ರದರ್ಶನಗೊಳ್ಳುತ್ತಿದ್ದು, ಭೇಟಿ ನೀಡುವ ಸಾರ್ವಜನಿಕರ ಮನಸೂರೆಗೊಳ್ಳುವಂತಿವೆ.



ನಾಟಕಗಳ ಪ್ರದರ್ಶನ ಉದ್ಘಾಟನೆ: ಜಗದ್ಗುರುಗಳವರು, ಕನಕಪುರ, ವಾಟಾಳು, ಬೇನಕನಹಳ್ಳಿ, ಚುಂಚನಹಳ್ಳಿ ಮಠಗಳ ಶ್ರೀ ಶ್ರೀಗಳವರು ಹಾಗೂ ಶ್ರೀ ಅಲ್ಲಂ ವೀರಭದ್ರಪ್ಪ, ಶ್ರೀ ಎಸ್.ಪಿ. ಮಂಜುನಾಥ್ ಮೊದಲಾದವರಿದ್ದಾರೆ.



ಮಂಗಳವಾರ ಉತ್ಸವಮೂರ್ತಿಯನ್ನು ಶ್ರೀಮಠದಿಂದ ಕರ್ತೃಗದ್ದುಗೆಗೆ ಬಿಜಂಗೈಯಿಸಿದ ಸಂದರ್ಭದಲ್ಲಿ ಪರಮಪೂಜ್ಯರು, ಬೇನಕನಹಳ್ಳಿ ಶ್ರೀಗಳು ಹಾಗೂ ಭಕ್ತಾಧಿಗಳಿದ್ದಾರೆ.

ಛಾಯಾಚಿತ್ರಗಳು: ವಾಟಾಳ್ ಆನಂದ್, ಬಿ.ಎನ್. ನಿಜಲಿಂಗಪ್ಪ, ಜಿ.ಎಸ್. ಜಯಶಂಕರಸ್ವಾಮಿ, ಮಂಜುನಾಥ್, ಸುತ್ತೂರು ನಂಜುಂಡನಾಯಕ

# ದೇಶ, ಸಂಸ್ಕೃತಿ ನಾಡಭಾಷೆ ಉಳಿಸಿ– ಎಚ್‌ಎಸ್‌ವಿ



ಪೂಜ್ಯರು ಹಾಗೂ ಗಣ್ಯರುಗಳಿಂದ ಅಭಿನಂದನೆಯನ್ನು ಸ್ವೀಕರಿಸಿದ 85ನೇ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷರಾದ ಡಾ. ಎಚ್.ಎಸ್. ವೆಂಕಟೇಶಮೂರ್ತಿಯವರು ಮಾತನಾಡಿ, ಸುತ್ತೂರು ಶ್ರೀಮಠ ಮತ್ತು ನನ್ನ ಸಂಬಂಧ ಅನೇಕ ದಶಕಗಳದ್ದು, ನಾನು ಶ್ರೀಕ್ಷೇತ್ರಕ್ಕೆ ಬರುತ್ತಿರುವುದು ಇದು ಮೂರನೆಯ ಬಾರಿ, ನಾವೆಲ್ಲರು ಶ್ರೀಮಠಕ್ಕೆ ಭಕ್ತರಾಗಿದ್ದೇವೆ. ಹಿಂದೆ ಮೈಸೂರಿನಲ್ಲಿ ನಡೆದ ಹಿರಿಯ ಕವಿ ಕೆ.ಎಸ್. ನರಸಿಂಹಸ್ವಾಮಿಯವರ ಸನ್ಮಾನ ಕಾರ್ಯಕ್ರಮದಲ್ಲಿ ಅವರ ಬಗ್ಗೆ ಮಾತನಾಡುವುದಕ್ಕೆ ಬೆಂಗಳೂರಿನಿಂದ ಬಂದಿದ್ದೆ. ಭಾಷಣವನ್ನು ಹಿಂದೆ ಕೇಳಿಸಿಕೊಳ್ಳುತ್ತಿದ್ದರು. ಆದರೆ ಇಂದು ಕೇಳಿಸಿ ಕೊಳ್ಳುವುದರ ಸಂಖ್ಯೆ ಕಡಿಮೆಯಾಗಿದೆ ಎಂದರು.

ಶ್ರೀ ಸುತ್ತೂರು ಮಹಾಸಂಸ್ಥಾನ ಮಠವು ಧಾರ್ಮಿಕ, ಶಿಕ್ಷಣ, ಸೇವಾಕ್ಷೇತ್ರದಲ್ಲಿ ಅಗಾಧವಾದ ಸೇವೆಯನ್ನು ಮಾಡಿ, ಜಗತ್ತಿನಾದ್ಯಂತ ಸೇವಾ ಕಾರ್ಯವನ್ನು ವಿಸ್ತರಿಸಿಕೊಂಡಿದೆ. ಶ್ರೀಮಠವು ಕೇವಲ ಧಾರ್ಮಿಕ ಮತ್ತು ಶಿಕ್ಷಣಕ್ಕೆ ಸಂಬಂಧಿಸದೆ ಸಮಾಜದೊಂದಿಗೆ, ಬೆರೆತು ಹಿಂದುಳಿದವರನ್ನು ಮುಂದಕ್ಕೆ ತರಲು ಪ್ರಯತ್ನಿಸುತ್ತಿರುವ ಈ ಸಂಸ್ಥೆಗೆ ನಾನು ಅಭಾರಿಯಾಗಿದ್ದೇನೆ ಎಂದು ನುಡಿದರು.

ನಾಲಿಗೆಯಿಂದಾಡುವ ಮಾತು ಮತ್ತು ಹೃದಯದಿಂದಾಡುವ ಮಾತಿನ ಬಗ್ಗೆ ಹೇಳಿದರು.ಮಾತಿನಿಂದ ಭಾಷೆ ಹುಟ್ಟಿದೆ, ಭಾಷೆಯಿಲ್ಲದೆ ಬದುಕಿಗೆ ಅರ್ಥ ವಿರುತ್ತಿರಲಿಲ್ಲ ಎಂದು ಮಾತು ಮತ್ತು ಮೌನದ ಬಗ್ಗೆ ಹೇಳಿದರು. ಮಾತು ಆಡಿದರೆ ಹೋಯಿತು, ಮುತ್ತು ಹೊಡೆದರೆ ಹೋಯಿತು ಎಂಬ ಗಾದೆಯ ಬಗ್ಗೆ ವಿವರಿಸಿ, ಇಂದು ಸನ್ಮಾನಿಸಿದ ಶ್ರೀಮಠಕ್ಕೆ ಹಾಗೂ ಭಾಗವಹಿಸಿದ್ದ ಸದ್ಭಕ್ತರಿಗೆ ವಂದಿಸಿ ಪ್ರತಿಯೊಬ್ಬರು ದೇಶ ಸಂಸ್ಕೃತಿ ನಾಡಭಾಷೆ ಉಳಿಸಬೇಕೆಂದರು. –ತೇಜ

# ಶೈಕ್ಷಣಿಕ ಹಾಗೂ ವಿಜ್ಞಾನ ವಸ್ತುಪ್ರದರ್ಶನ ಉದ್ಘಾಟನೆ

ಜಾತ್ರಾ ಮಹೋತ್ಸವದ ಅಂಗವಾಗಿ ಜೆಎಸ್‌ಎಸ್ ಸಾಮಾನ್ಯ ಶಿಕ್ಷಣ ವಿಭಾಗದಿಂದ ಏರ್ಪಡಿಸಲಾಗಿರುವ ಶೈಕ್ಷಣಿಕ ಹಾಗೂ ವಿಜ್ಞಾನ ವಸ್ತುಪ್ರದರ್ಶನವನ್ನು 21.01. 2020ರ ಸಾಯಂಕಾಲ 4.30 ಘಂಟೆಗೆ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಮಾಜಿ ಮುಖ್ಯಮಂತ್ರಿಗಳು ಹಾಗೂ ಮಾಜಿ ಕೇಂದ್ರ ಸಚಿವರಾದ ಶ್ರೀ ಎಂ. ವೀರಪ್ಪಮೊಯ್ಲಿಯವರು, ಕಾನೂನು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಸಣ್ಣನೀರಾವರಿ ಸಚಿವರಾದ ಶ್ರೀ ಮಾಧುಸ್ವಾಮಿಯವರು, ಮಾಜಿ ಸಚಿವರಾದ ಶ್ರೀ ಬಿ. ಜಿ. ಪುಟ್ಟಸ್ವಾಮಿ ಮತ್ತು ಮಾಜಿ ಸಚಿವರಾದ ಶ್ರೀ ವಾಸುರವರು ಉದ್ಘಾಟಿಸಿ ನಂತರ ಪ್ರದರ್ಶನವನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.



ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಸಚಿವರಾದ ಶ್ರೀ ಜೆ.ಸಿ. ಮಾಧುಸ್ವಾಮಿಯವರು ಉದ್ಘಾಟಿಸಿದರು. ಚಿತ್ರದಲ್ಲಿ ಶ್ರೀ ಎಂ. ವೀರಪ್ಪಮೊಯ್ಲಿ, ಶ್ರೀ ಬಿ.ಜೆ. ಪುಟ್ಟಸ್ವಾಮಿ ಶ್ರೀ ಎನ್. ರೇಣುಕಾಸ್ವಾಮಿ ಮೊದಲಾದವರಿದ್ದಾರೆ.

ತ್ಯಾಜ್ಯ ನಿರ್ವಹಣೆ ಮತ್ತು ಪ್ಲಾಸ್ಟಿಕ್ ಮುಕ್ತ ಪರಿಸರದ 21 ಮಾದರಿಗಳು, ಭೌತವಿಜ್ಞಾನ, ನವೀಕರಿಸಬಹುದಾದ ಶಕ್ತಿ ಸಂಪನ್ಮೂಲಗಳ 37 ಮಾದರಿಗಳು, ಭೂವಿಜ್ಞಾನ, ವ್ಯವಸಾಯ, ಸಾವಯವ ಕೃಷಿ ಹಾಗೂ ಜೈವಿಕ ವಿಜ್ಞಾನ, ರಸಾಯನಶಾಸ್ತ್ರ ಮತ್ತು ಜೀವಶಾಸ್ತ್ರದ 30 ಮಾದರಿಗಳು, ಕಲೆ ಮತ್ತು ಸಂಸ್ಕೃತಿ, ಭವಿಷ್ಯದ ಸಾರಿಗೆ ಮತ್ತು ಸಂಪರ್ಕದ 20 ಮಾದರಿಗಳು, ಗಣಿತ ಮಾದರಿಗಳು, ಶೈಕ್ಷಣಿಕ ಆಟಗಳು ಮತ್ತು ಕ್ರೀಡೆಯ 25 ಮಾದರಿಗಳು, ಭಾಷೆಗಳು ಮತ್ತು ಮಾನವಿಕ ವಿಜ್ಞಾನದ 36 ಮಾದರಿಗಳು, ಹಿರಿಯ ಪ್ರಾಥಮಿಕ ಶಾಲೆ ಮತ್ತು ಬಿಎಡ್ ವಿಭಾಗದ 18 ಮಾದರಿಗಳು ಸೇರಿ ಒಟ್ಟು 9 ವಿಭಾಗಗಳಲ್ಲಿ 187 ವಿವಿಧ ಮಾದರಿ ಗಳನ್ನು ಪ್ರದರ್ಶಿಸಲಾಗಿದೆ. ಸುಮಾರು 64 ಜನ ಶಿಕ್ಷಕರು ಹಾಗೂ 374 ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ.

ಕಳೆದ ವರ್ಷದಂತೆ ಈ ವರ್ಷವೂ ಅಗಸ್ತ್ಯ ಫೌಂಡೇಷನ್, ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ಬೆಂಗಳೂರು, ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಕೇಂದ್ರ, ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ ಮಂಗಳೂರು, ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರ ಧಾರವಾಡ, ಜವಾಹರಲಾಲ ನೆಹರು ತಾರಾಲಯ ಬೆಂಗಳೂರು ಇವರ ವತಿಯಿಂದ ಹಲವಾರು ಮಾದರಿಗಳನ್ನು ಪ್ರದರ್ಶಿಸಲಾಗಿದೆ. ಈ ಸಂದರ್ಭದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಅಧಿಕಾರಿಗಳು ಹಾಜರಿದ್ದರು.



# ಜನರ ರಕ್ಷಣೆ ನಮ್ಮ ಹೊಣೆ

ಸಮಾಜದ ಶಾಂತಿ, ಸುವ್ಯವಸ್ಥೆ ಮತ್ತು ಭದ್ರತೆ ಕಾಪಾಡುವಲ್ಲಿ ಪೊಲೀಸ್ ಇಲಾಖೆಯ ಪಾತ್ರ ಅನನ್ಯ. ಜನರ ರಕ್ಷಣೆಯೇ ನಮ್ಮ ಹೊಣೆ ಎಂದು ಪೊಲೀಸ್ ಸಿಬ್ಬಂದಿ ಹಗಲು ರಾತ್ರಿ ಕರ್ತವ್ಯ ನಿರತರಾಗಿರುತ್ತಾರೆ. ಎಲ್ಲ ಸಮಯದಲ್ಲೂ ಜಾಗೃತರಾಗಿ ಶಿಸ್ತು, ಶಾಂತಿಯನ್ನು ಕಾಪಾಡುತ್ತಾರೆ. ದುಷ್ಟಶಕ್ತಿಗಳನ್ನು ದಮನಮಾಡಿ ಸಮಸ್ತ ಜನರು ನೆಮ್ಮದಿಯಿಂದ ಬಾಳಲು ಶ್ರಮಿಸುವ ಪೊಲೀಸರ ಸೇವಾನಿಷ್ಠೆ ಶ್ಲಾಘನೀಯ.

ಜಾತ್ರಾ ಮಹೋತ್ಸವಕ್ಕೆ ಆಗಮಿಸುವ ಸಾರ್ವಜನಿಕರಿಗೆ ಭದ್ರತೆಯನ್ನು ಒದಗಿಸುವ ಸಲುವಾಗಿ ಪೊಲೀಸ್ ಇಲಾಖೆಯ ವಿವಿಧ ಭಾಗಗಳ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. 14 ವಿಭಾಗಗಳನ್ನೊಳಗೊಂಡಿರುವ ಇಲಾಖೆಯಲ್ಲಿ ಸುಮಾರು 800 ಪೊಲೀಸ್ ಸಿಬ್ಬಂದಿಗಳು ಹಾಗೂ ಹೋಮ್‌ಗಾರ್ಡ್‌ಗಳು. ಚಾಮರಾಜನಗರ, ಹಾಸನ, ಕೊಡಗು ಮತ್ತು ಮೈಸೂರು ಜಿಲ್ಲೆಗಳಿಂದ ಆಗಮಿಸಿ ಭದ್ರತಾ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ಭದ್ರತೆ ಮತ್ತು ಪೊಲೀಸ್ ಸಿಬ್ಬಂದಿಗಳ ಮುಖ್ಯಸ್ಥರಾಗಿ ಶ್ರೀ ಸಿ.ಬಿ.ರಿಷ್ಯಂತ್‌ರವರು ಇದ್ದಾರೆ. ಇಬ್ಬರು ಡಿ.ಎಸ್.ಪಿ, ಒಂಭತ್ತು ಸಿ.ಪಿ.ಐ, ಮೂವತ್ತು ಎಸ್.ಐ, ನೂರಿಪ್ಪತ್ತು ಮಹಿಳಾ ಸಿಬ್ಬಂದಿಗಳು ಕಾರ್ಯನಿರತರಾಗಿದ್ದಾರೆ. ಜಾತ್ರೆಯ ದಾಸೋಹ ಸ್ಥಳ, ವಸ್ತುಪ್ರದರ್ಶನ, ಕರ್ತೃಗದ್ದುಗೆ, ವಾಹನ ನಿಲ್ದಾಣ ಮೊದಲಾದ ಸ್ಥಳಗಳಲ್ಲಿ ಭದ್ರತಾ ತಂಡವನ್ನು ನಿಯೋಜಿಸಲಾಗಿದೆ. ಜಾತ್ರೆಗೆ ಆಗಮಿಸುವ ಗಣ್ಯರಿಗೆ ಬೆಂಗಾವಲುಪಡೆ, ಗನ್‌ಮ್ಯಾನ್‌ಗಳನ್ನು ನೇಮಿಸಲಾಗಿದೆ. ಇದರ ಜೊತೆಗೆ ಅಗ್ನಿಶಾಮಕ ದಳದವರು ಕಾರ್ಯನಿರ್ವಹಿಸುತ್ತಿದ್ದಾರೆ. –ಮದನ್ ಕೆ.ಪಿ

Printed by : Academy Newspapers Private Limited (Publishers of Star of Mysore and Mysooru Mithra)
15-C, Industrial 'A' Layout, Bannimantap, Mysore-570 015